# ಸರ್ಕಾರಿ ಶಾಲೆಗಳಿಗೆ ಕಂಪ್ಯೂಟರ್ ಶಿಕ್ಷಣದ ಭರವಸೆ



**ನೆಲಮಂಗಲ:** ನೆಲಮಂಗಲ ತಾಲೂಕಿನ ಬರದಿ ಮಂಡಿಗೆರೆ ಗ್ರಾಮದ ಸರ್ಕಾರಿ ಶಾಲೆಯಲ್ಲಿ ವಿದ್ಯಾರ್ಥಿಗಳ ಡಿಜಿಟಲ್ ಶಿಕ್ಷಣಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ Turner Consulting and Management Services Pvt. Ltd. ಸಂಸ್ಥೆಯ ಸಿಎಸ್‌ಆರ್ (CSR) ಯೋಜನೆಯಡಿ, ಭರವಸೆ NGO ಕಂಪ್ಯೂಟರ್ ವ್ಯವಸ್ಥೆಗಳ ವಿತರಣೆ ಹಾಗೂ ಕಂಪ್ಯೂಟರ್ ಲ್ಯಾಬ್ ಸ್ಥಾಪನಾ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಈ ಯೋಜನೆಯ ಭಾಗವಾಗಿ ಶಾಲೆಗೆ ಒಟ್ಟು 10 ಕಂಪ್ಯೂಟರ್ ವ್ಯವಸ್ಥೆಗಳನ್ನು ವಿತರಿಸಲಾಯಿತು. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ತಂತ್ರಜ್ಞಾನ ಆಧಾರಿತ ಶಿಕ್ಷಣದ ಅವಕಾಶ ಕಲ್ಪಿಸುವುದು ಹಾಗೂ ಮೂಲಭೂತ ಕಂಪ್ಯೂಟರ್ ಜ್ಞಾನವನ್ನು ಹೆಚ್ಚಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಭರವಸೆ ಸಂಸ್ಥೆಯ ಅಧ್ಯಕ್ಷರಾದ ಸುನೀಲ್ ಗೌಡ, ಕಾರ್ಯದರ್ಶಿ ಮಂಜೇಶ್ ಹಾಗೂ ಟರ್ನರ್ ಸಂಸ್ಥೆಯ ಲೋಕೇಂದ್ರ ರವರು ಇಂದಿನ ಯುಗದಲ್ಲಿ ಡಿಜಿಟಲ್ ಶಿಕ್ಷಣದ ಅಗತ್ಯತೆಯನ್ನು ಒತ್ತಿಹೇಳಿ, ವಿದ್ಯಾರ್ಥಿಗಳ ಭವಿಷ್ಯ ನಿರ್ಮಾಣದಲ್ಲಿ ಇಂತಹ ಸಾಮಾಜಿಕ ಹೊಣೆಗಾರಿಕೆಯ ಯೋಜನೆಗಳು ಮಹತ್ವದ ಪಾತ್ರವಹಿಸುತ್ತವೆ ಎಂದು ತಿಳಿಸಿದರು.

ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗವು ಈ ನೆರವಿಗೆ ಕೃತಜ್ಞತೆ ಸಲ್ಲಿಸಿ, ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಇದು ಮಹತ್ತರ ಸಹಾಯವಾಗಲಿದೆ ಎಂದು ಅಭಿಪ್ರಾಯಪಟ್ಟರು. ಈ ಕಾರ್ಯಕ್ರಮವು ಗ್ರಾಮೀಣ ವಿದ್ಯಾರ್ಥಿಗಳಿಗೆ ಸಮಾನ ಶಿಕ್ಷಣಾವಕಾಶ ಒದಗಿಸುವ ದಿಸೆಯಲ್ಲಿ ಮಹತ್ವದ ಹೆಜ್ಜೆಯಾಗಿದೆ.

ನಂ1 ವಿಜಯವಾಣಿ
VIJAYAVANI » BENGALURU
ಬೆಂಗಳೂರು ಸಿಟಿ ಎಕ್ಸ್‌ಪ್ರೆಸ್
ಸೋಮವಾರ 19 ಮೇ 2025
19 MAY 2025



'ವಿಜಯವಾಣಿ' ಎಜುಕೇಷನ್ ಎಕ್ಸ್‌ಪೋದ ಮಳಿಗೆಯೊಂದರಲ್ಲಿ ವಿದ್ಯಾರ್ಥಿಗಳು ಹಾಗೂ ಪಾಲಕರಿಗೆ ಮಾಹಿತಿ ನೀಡಿದ ಶಿಕ್ಷಣ ಸಂಸ್ಥೆ ಸಿಬ್ಬಂದಿ.

5B ವಿಜಯವಾಣಿ EDUCATION EXPO 2025 For The Generation Next

## ಸ್ಮರಣಿಕೆ ನೀಡಿ ಗೌರವ

ಎಕ್ಸ್‌ಪೋದಲ್ಲಿ ಭಾಗವಹಿಸಿದ್ದ ಕಾಲೇಜುಗಳು, ವಿವಿಗಳು ಮತ್ತು ವಿವಿಧ ಶೈಕ್ಷಣಿಕ ಸಂಸ್ಥೆ ಪ್ರತಿನಿಧಿಗಳಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಈ ವೇಳೆ ಪ್ರತಿನಿಧಿಗಳು ಕೂಡ ಪ್ರತಿಯಾಗಿ ಅವಕಾಶ ನೀಡಿದ್ದಕ್ಕಾಗಿ ವಿಆರ್‌ಎಲ್ ಸಮೂಹ ಸಂಸ್ಥೆಗಳ ಚೇರ್ಮನ್ ಡಾ. ವಿಜಯ ಸಂಕೇಶ್ವರ ಅವರಿಗೆ ಧನ್ಯವಾದ ಸಲ್ಲಿಸಿದರು.



ಪಿಯುಸಿಯಲ್ಲಿ ಶೇ.90ಕ್ಕೂ ಅಧಿಕ ಅಂಕ ಗಳಿಸಿದ ಹರ್ಷಿತಾಗೆ 'ವಿಜಯವಾಣಿ' ಎಜುಕೇಷನ್ ಎಕ್ಸ್‌ಪೋದಲ್ಲಿ ಬನಶಂಕರಿಯ ಶ್ರೀಕೃಷ್ಣ ಪಿಯು ಮತ್ತು ಡಿಗ್ರಿ ಕಾಲೇಜಿನ ಶೈಕ್ಷಣಿಕ ನಿರ್ದೇಶಕ ಪ್ರೊ. ಎಸ್.ಪಿ.ಮನೋಹರ್ ಅವರು ಬೆಳ್ಳಿ ನಾಣ್ಯವನ್ನು ವಿತರಿಸಿದರು.

# ಎಜುಕೇಷನ್ ಎಕ್ಸ್‌ಪೋ ಸೂಪರ್ ಹಿಟ್

## ಪಾಲಕರೊಂದಿಗೆ ಆಗಮಿಸಿ ಮಾಹಿತಿ ಪಡೆದ ವಿದ್ಯಾರ್ಥಿಗಳು | ಸಾವಿರಾರು ಮಂದಿ ಭಾಗಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ಎದುರುನೋಡುತ್ತಿರುವ ವಿದ್ಯಾರ್ಥಿಗಳು ಹಾಗೂ ಅವರ ಪಾಲಕರಿಗಾಗಿ ಕನ್ನಡದ ನಂ.1 ದಿನಪತ್ರಿಕೆ **ವಿಜಯವಾಣಿ** ಆಯೋಜಿಸಿದ್ದ ಎರಡು ದಿನಗಳ 'ಎಜುಕೇಷನ್ ಎಕ್ಸ್‌ಪೋ'ಗೆ ಅದ್ದೂರಿ ತೆರೆ ಬಿತ್ತು.

ವಿದ್ಯಾಪೀಠ ವೃತ್ತದ ಡೊಂಕಾಳ ಗ್ರೌಂಡ್‌ನಲ್ಲಿ (ಶಂಕರ್‌ನಾಗ್ ಆಟದ ಮೈದಾನ) ಆಯೋಜಿಸಿದ್ದ ಎಕ್ಸ್‌ಪೋಗೆ ಸಾವಿರಾರು ವಿದ್ಯಾರ್ಥಿಗಳು ತಮ್ಮ ಸ್ನೇಹಿತರು, ಪಾಲಕರೊಂದಿಗೆ ಆಗಮಿಸಿ ತಮಗೆ ಬೇಕಾದ ಮಾಹಿತಿಗಳನ್ನು ಪಡೆದುಕೊಂಡರು. ಅಲ್ಲದೆ, ಒಂದೇ ಸೂರಿನಡಿ ಹತ್ತಾರು ಕಾಲೇಜುಗಳು ಆಗಮಿಸಿ ಶೈಕ್ಷಣಿಕ ಮಾಹಿತಿಗಳನ್ನು ಹಂಚಿಕೊಳ್ಳುವ ಜತೆಗೆ ಖಾಸಗಿ ಕಂಪನಿಗಳು ದೊರೆಯುವ ಸಾಲಸೌಲಭ್ಯಗಳ ಮಾಹಿತಿಯನ್ನು ಕೂಡ ನೀಡಿದವು. ಇದರಿಂದಾಗಿ ಪಾಲಕರು ಖುಷಿಯಾದರು.

ನಮಗೆ ಬೇಕಾದ ರೀತಿಯಲ್ಲಿ ಕಾಲೇಜುಗಳಿಗಾಗಿ ಅಲೆದಾಡುವುದು ತಪ್ಪಿತು. ಎಕ್ಸ್‌ಪೋದಿಂದಾಗಿ ಸಾಕಷ್ಟು ಸಮಯ ಉಳಿಯಿತು. ನಾವು ಅಂದುಕೊಂಡಿದ್ದಕ್ಕಿಂತ ಹೆಚ್ಚಿನ ಮಾಹಿತಿ ದೊರೆಯಿತು. ಉನ್ನತ ಶಿಕ್ಷಣ ಕುರಿತು ತಮ್ಮಲ್ಲಿದ್ದ ಹಲವು ಗೊಂದಲಗಳು ಬಗೆಹರಿದವು. ಒಂದು ರೀತಿಯಲ್ಲಿ ಅರಿವು ಮೂಡಿಸುವ ಕೆಲಸವನ್ನು ಎಕ್ಸ್‌ಪೋ ಮಾಡಿದೆ. ಇದಕ್ಕಾಗಿ '**ವಿಜಯವಾಣಿ**' ತಂಡಕ್ಕೆ ಧನ್ಯವಾದಗಳನ್ನು ಅರ್ಪಿಸಿದರು.

ಯಾವ ಕೋರ್ಸ್‌ಗೆ ಎಲ್ಲಿ ಪ್ಲೇಸ್‌ಮೆಂಟ್ ದೊರೆಯಲಿದೆ ಎಂಬು ನೇರಿ, ಇಂಜಿನಿಯರಿಂಗ್ ಹೊರತಾಗಿ ಬಿಎಸ್‌ಸಿ ಸೈನ್ಸ್, ನರ್ಸಿಂಗ್, ಬಿಎಸ್‌ಸಿ ಕೃಷಿ





ವಿದ್ಯಾಪೀಠ ವೃತ್ತದ ಡೊಂಕಾಳ ಗ್ರೌಂಡ್‌ನಲ್ಲಿ ಆಯೋಜಿಸಿದ್ದ 'ವಿಜಯವಾಣಿ' ಎಜುಕೇಷನ್ ಎಕ್ಸ್‌ಪೋದ ಲಕ್ಕಿಡಿಪ್‌ನಲ್ಲಿ ಆಯ್ಕೆಯಾದ ಅಲಿಯಾ, ಎಸ್. ದೀಕ್ಷಿತ್, ಐ. ಕಾರ್ತಿಕ್ ಹಾಗೂ (ಬಲಭಾಗದ ಚಿತ್ರ) ಲಿಖಿತಾ, ಎಸ್.ಎಲ್. ತೇಜಸ್ವಿನಿ, ಬಿ.ಆರ್. ಚಂದು, ಕೆ. ಹರೀಶ್, ವರ್ಷಿಣಿ, ಆರ್.ರುಚಿತಾ ಅವರಿಗೆ ಪತ್ರಿಕೆಯ ಪ್ರಸರಣ ವಿಭಾಗದ ಪ್ರಧಾನ ವ್ಯವಸ್ಥಾಪಕ ವಿದ್ಯಾಧರ ಪೂಜಾರ ಬಹುಮಾನ ವಿತರಿಸಿದರು. ಅಷ್ಮತ್ ನದಾಫ್, ಬಿ.ಎಸ್. ಮಮತಾ ಮತ್ತಿತರರು ಉಪಸ್ಥಿತರಿದ್ದರು.

## ಗುಣಮಟ್ಟದ ಶಿಕ್ಷಣಕ್ಕೆ ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್

**ಮೈ**ಸೂರಿನ ಗೋಕುಲಂ 3ನೇ ಹಂತದಲ್ಲಿರುವ ಈ ಕಾಲೇಜಿನಲ್ಲಿ ವಿವಿಧ ಇಂಜಿನಿಯರಿಂಗ್ ಕೋರ್ಸ್‌ಗಳು ಲಭ್ಯವಿವೆ. ಈ ಸ್ವಾಯತ್ತ ಸಂಸ್ಥೆ ಗುಣಮಟ್ಟದ ಶಿಕ್ಷಣಕ್ಕೆ ಹೆಸರುವಾಸಿಯಾಗಿದೆ. ಪದವಿ-ಸಿಎಸ್‌ಇ, ಸಿಎಸ್‌ಇ-ಎಐ ಆ್ಯಂಡ್ ಎಂಸಿ, ಇಸಿಇ, ಇಇಇ, ಎಂಇ, ಸಿವಿಲ್ ಕೋರ್ಸ್‌ಗಳು ಲಭ್ಯವಿವೆ. ಸ್ನಾತಕೋತ್ತರ ಪದವಿ, ಎಂ.ಟೆಕ್., ಎಂಸಿಎ, ಎಂಬಿಎ ಕೋರ್ಸ್‌ಗಳಿವೆ. ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಸಂಧ್ಯಾ ಕಾಲೇಜು ತೆರೆಯಲಾಗಿದೆ. ಅಲ್ಲಿ ಸಿಎಸ್‌ಇ, ಎಐಎಂಎಲ್, ಇಸಿಇ, ಎಂಇ ಕೋರ್ಸ್



ಲಭ್ಯವಿದೆ. ಪಿಎಚ್.ಡಿ. ಅಭ್ಯರ್ಥಿಗಳಿಗೂ ಸೌಲಭ್ಯಗಳಿವೆ. ಕಾಲೇಜಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದ ವ್ಯವಸ್ಥೆಯೂ ಇದೆ. ಪ್ರತಿವರ್ಷ ದೇಶ-ವಿದೇಶದ ಕಂಪನಿಗಳು ಕ್ಯಾಂಪಸ್ ಸೆಲೆಕ್ಷನ್‌ಗಾಗಿ ನಮ್ಮ ಕಾಲೇಜಿಗೆ ಬರುತ್ತದೆ. ಶೇ.85 ವಿದ್ಯಾರ್ಥಿಗಳು ಆಯ್ಕೆಯಾಗುತ್ತಾರೆ ಎಂದು ಸಂಸ್ಥೆಯ ತಾಂತ್ರಿಕ ಸಿಬ್ಬಂದಿ ಸತೀಶ್ ಕುಮಾರ್ ತಿಳಿಸಿದರು.

# 'ಯಂಗ್ ಕ್ಲೈಮೇಟ್ ಚಾಂಪಿಯನ್' ಕಾರ್ಯಾಗಾರ




**ಬೆಂಗಳೂರು:** ಶೇಷಾದ್ರಿಪುರಂ ಮಹಾವಿದ್ಯಾಲಯದಲ್ಲಿ ಪರಿಸರ ಸ್ನೇಹಿ ಘಟಕವು ಭರವಸೆ ಮತ್ತು ಅರ್ತ್ ಡೆ ನೆಟ್ ವರ್ಕ ಆಫ್ ಇಂಡಿಯಾ ಎನ್.ಜಿ.ಓ ಸಂಸ್ಥೆಗಳ ಸಹ ಯೋಗದೊಂದೆಗೆ ಶನಿವಾರದಂದು ಕಾಲೇಜಿನ ಸಂಭಾಗಣದಲ್ಲಿ 'ಯಂಗ್ ಕ್ಲೈಮೇಟ್ ಚಾಂಪಿಯನ್' ಕಾರ್ಯಾಗಾರವನ್ನು ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿತ್ತು.

ಕಾರ್ಯಕ್ರವು ಸಂಸ್ಥೆಯ ಗೀತೆಯೊಂದಿಗೆ ಆರಂಭ ವಾಯಿತು. ಭರವಸೆ ಸಂಸ್ಥೆಯ ಸಂಸ್ಥಾಪಕರಾದ ಸುನಿಲ್ ಕುಮಾರ್, ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಗಳಾದ ವಿನಾಯಕ ಸಾಲೂಂಕೆ ಹಾಗೂ ಪ್ರಾಂಶುಪಾಲರಾದ ಡಾ.ಬಿ.ಜಿ.ಭಾಸಕರರವರು, ಪರಿಸರ ಸ್ನೇಹಿ ಸಂಚಾಲಕರಾದ ಡಾ.ಸೌಮ್ಯ ಬಿ.ಎಲ್, ಸಹ ಸಂಚಾಲಕರಾದ ಮಂಜುನಾಥ್ ಹೆಚ್. ಹಾಗೂ ಇತರ ಸದಸ್ಯರು ಗಿಡಕ್ಕೆ ನೀರೆರೆಯುವುದರ ಮೂಲಕ ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಪ್ರಸ್ತುತ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಜಿ.ಭಾಸ್ಕರವರು ವಹಿಸಿದ್ದರು. ಕಾರ್ಯಾಗಾರದಲ್ಲಿ ಉಪಸ್ಥಿತರಿದ್ದ ಎಲ್ಲಾ ಗಣ್ಯರನ್ನು ಹಾಗೂ ವಿದ್ಯಾರ್ಥಿಗಳನ್ನು ಉಪನ್ಯಾಸಕರಾದ ಶ್ರೀ ರವಿ ಕುಮಾರ್ ರವರು ಸ್ವಾಗತಿಸಿದರು. ಸಂಚಾಲಕರಾದ ಡಾ.ಬಿ.ಎಲ್.ಸೌಮ್ಯ ರವರು ಪರಿಚಯಿಸಿದರು.

ಸಂಪನ್ಮೂಲ ವ್ಯಕ್ತಿಗಳು ಪರಿಸರದ ಅವಶ್ಯಕತೆ, ರಕ್ಷಣೆ ಹಾಗೂ ಅದರ ಅನಿವಾರ್ಯತೆಯ ಕುರಿತು ಹಲವು ಉದಾಹರಣೆಗಳೊಂದಿಗೆ ವಿಚಾರಗಳನ್ನು ಮಂಡಿಸಿ, ಮಕ್ಕಳಲ್ಲಿ ಪರಿಸದ ಬಗ್ಗೆ ಕಾಳಜಿ ಹಾಗೂ ಜಾಗೃತಿ ಮೂಡಿಸಿದರು. ಇಂದಿನ ಪೀಳಿಗೆಯು ಮುಂದಿನ ಪೀಳಿಗೆಗಾಗಿ ನಿರ್ವಹಬೇಕಾದ ಜವಬ್ದಾರಿಗಳ ಬಗ್ಗೆ ಅರಿಬಗ್ ಮೂಡಿಸಿದರು. ಪರಿಸರ ಉಳಿಸಿ, ಬೆಳಿಸಿ, ಪೋಷಿಸಿ ಎಂಬ ಮೂಲ ತತ್ವದ ಬಗ್ಗೆ ತಿಳಿಸಿದರು. ವಿದ್ಯಾರ್ಥಿಗಳು ನಿರ್ವಹಿಸ ಬೇಕಾದ ಚಿಕ್ಕ ಚಿಕ್ಕ ಜವಾಬ್ದಾರಿಗಳ ಬಗ್ಗೆಯೂ ಹಲವು ಉದಾಹರಣೆಗಳೊಂದಿಗೆ ತಿಳಿ ಹೇಳಿದರು.

ಕಾರ್ಯಕ್ರಮದ ಕೊನೆಯಲ್ಲಿ ನೆರೆದಿರುವವರಿಗೆ ವಂದನೆಗಳನ್ನು ಉಪನ್ಯಾಸಕರಾದ ಶ್ರೀ ಹೆಚ್.ಮಂಜುನಾಥ್ ರವರು ತಿಳಿಸಿದರು. ಕಾರ್ಯಕ್ರಮದ ವೇದಿಕೆಯನ್ನು ವಿದ್ಯಾರ್ಥಿನಿಯಾದ ಕುಮಾರಿ ಖುಶಿಚಾವತ್ ನಿರ್ವಹಿಸಿದರು. ಕಾರ್ಯಾಗಾರದಲ್ಲಿ ಇನ್ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಭರವಸೆ ಸಂಸ್ಥೆಯಿಂದ ಪ್ರಮಾಣ ಪತ್ರಗಳನ್ನು ವಿತರಿಸಿದರು.

VK ವಿಜಯ ಕರ್ನಾಟಕ
e-paper

# ಸರಕಾರಿ ಶಾಲೆಗೆ ಹೈಟೆಕ್ ಸ್ಪರ್ಶ

## 15 ವರ್ಷಗಳಿಂದ ಸುಣ್ಣ ಬಣ್ಣ ಕಾಣದ ಸ್ಕೂಲ್‌ಗೆ ಹೊಸ ರೂಪ । ಭರವಸೆ ಟ್ರಸ್ಟ್ ಸೇವಾ ಕಾರ್ಯಕ್ಕೆ ಮೆಚ್ಚುಗೆ

**ವಿಕ ಸುದ್ದಿಲೋಕ** ಕೆ.ಆರ್.ಪೇಟೆ

ತಾಲೂಕಿನ ಕಸಬಾ ಹೋಬಳಿಯ ಕರೋಟಿ ಗ್ರಾಮದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಕಟ್ಟಡಕ್ಕೆ ಭರವಸೆ ಟ್ರಸ್ಟ್ ಪದಾಧಿಕಾರಿಗಳು ಸುಣ್ಣ ಬಣ್ಣ ಬಳಿದು, ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರ ಮೂಡಿಸಿ ಹೈಟೆಕ್ ಸ್ಪರ್ಶ ನೀಡಿದ್ದಾರೆ.

ಶಾಲಾ ಕಟ್ಟಡ ಕಳೆದ 15 ವರ್ಷ ದಿಂದ ಸುಣ್ಣಬಣ್ಣ ಕಂಡಿರಲಿಲ್ಲ. ಈ ಹಿನ್ನೆಲೆಯಲ್ಲಿ ಭರವಸೆ ಟ್ರಸ್ಟ್ ಪದಾಧಿಕಾರಿಗಳು ಹಾಗೂ ಕಲಾವಿದರು 2 ದಿನಗಳ ಕಾಲ ಶಾಲೆಗೆ ಸುಣ್ಣ ಬಣ್ಣ ಬಳಿದು ಹೊಸ ರೂಪ ನೀಡಿದ್ದಾರೆ.

ಬಳಗದ ಪ್ರಮುಖ ಸದಸ್ಯ ಸುನಿಲ್ ಗೌಡ ಮಾತನಾಡಿ, ''ಭರವಸೆ ಟ್ರಸ್ಟ್ ಮೂಲಕ ಹಲವಾರು ಸಮಾಜಮುಖಿ ಆಳಿಲು ಕಾಯಕವನ್ನು ರಾಜ್ಯಾದ್ಯಂತ ಕೈಗೊಳ್ಳುತ್ತಿದ್ದೇವೆ. ಅದರಂತೆ 69ನೇ ಕನ್ನಡ ರಾಜ್ಯೋತ್ಸವ ಹಾಗೂ ಶಂಕರ್ ನಾಗ್ ಅವರ ಹುಟ್ಟುಹಬ್ಬದ ಪ್ರಯುಕ್ತ ಸರಕಾರಿ ಶಾಲೆಯ ಉಳಿವಿಗಾಗಿ ಕರೋಟಿ ಗ್ರಾಮದ ಶಾಲೆಗೆ ಸುಣ್ಣ ಬಣ್ಣ ಬಳಿಯುವ ಕೆಲಸ ಕೈಗೊಂಡಿದ್ದೇವೆ,'' ಎಂದು ಹೇಳಿದರು.



ಕೆ.ಆರ್.ಪೇಟೆ ತಾಲೂಕಿನ ಕಸಬಾ ಹೋಬಳಿಯ ಕರೋಟಿ ಗ್ರಾಮದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಕಟ್ಟಡಕ್ಕೆ ಸುಣ್ಣ ಬಣ್ಣ ಬಳಿದು ಹೈಟೆಕ್ ಸ್ಪರ್ಶ ನೀಡಿದ ಭರವಸೆ ಟ್ರಸ್ಟ್ ಪದಾಧಿಕಾರಿಗಳು.

ಶಾಲಾ ಮುಖ್ಯ ಶಿಕ್ಷಕ ಮಂಜೇಗೌಡ ಮಾತನಾಡಿ, ''ಸರಕಾರದ ಜತೆಗೆ ಸಮಾಜ ಸೇವಕರು, ಭರವಸೆ ಟ್ರಸ್ಟ್ ನಂತಹ ಸಂಘ ಸಂಸ್ಥೆಗಳು ಸಹಕಾರ ನೀಡಿದರೆ ಸರಕಾರಿ ಶಾಲೆಗಳು ಮತ್ತಷ್ಟು ಅಭಿವೃದ್ಧಿಯಾಗಲು ಸಾಧ್ಯ. ಖಾಸಗಿ ಶಾಲೆಗಿಂತ ನಮ್ಮ ಸರಕಾರಿ ಶಾಲೆಯೇನು ಕಡಿಮೆ ಇಲ್ಲ ಎಂಬಂತೆ ಕಾಣುತ್ತಿದೆ. ಇದಕ್ಕೆಲ್ಲ ಕಾರಣ ಭರವಸೆ ಟ್ರಸ್ಟ್ ಸದಸ್ಯರು. ಸ್ವಯಂಪ್ರೇರಿತವಾಗಿ ಸರಕಾರಿ ಶಾಲೆಗೆ ಸುಣ್ಣ-ಬಣ್ಣ ಬಳಿದು ಮಕ್ಕಳ ಉತ್ಸಾಹಕ್ಕೆ ಉತ್ತೇಜನ ನೀಡಿದ್ದಾರೆ,'' ಎಂದು ತಿಳಿಸಿದರು.

ಗ್ರಾಮದ ಮುಖಂಡ ಪುಟ್ಟೇಗೌಡ ಮಾತನಾಡಿ, ''ಶಾಲೆಗೆ ಹೊಸ ರೂಪ ಸಿಕ್ಕಿರುವುದರಿಂದ ಮುಂದಿನ ವರ್ಷಗಳಲ್ಲಿ ಶಾಲೆಗೆ ಸೇರುವ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗುವ ನಿರೀಕ್ಷೆಯಿದೆ.,'' ಎಂದರು.

ಸರಕಾರಿ ಶಾಲೆಗೆ ಮಕ್ಕಳನ್ನು ಆಕರ್ಷಿಸಲು ಕೆಲವೊಂದು ಬಣ್ಣಬಣ್ಣದ ಚಿತ್ತಾರವನ್ನು ಶಾಲೆಯ ಗೋಡೆ ಹಾಗೂ ಕಾಂಪೌಂಡ್ ಮೇಲೆ ಬಿಡಿಸಿದ ಭರವಸೆ ಟ್ರಸ್ಟ್ ಪದಾಧಿಕಾರಿಗಳು, ಸದಸ್ಯರನ್ನು ಕರೋಟಿ ಗ್ರಾಮಸ್ಥರು ಹಾಗೂ ಶಾಲಾ ಎಸ್.ಡಿ.ಎಂ.ಸಿ ಪದಾಧಿಕಾರಿಗಳು ಸನ್ಮಾನಿಸುವ ಮುಖಾಂತರ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಎನ್.ಜಿ.ಒ ಭರವಸೆ ಪ್ರಮುಖ ಸದಸ್ಯರಾದ ಅನುಷಾ, ಸುನಿಲ್, ಮಂಜೇಶ್, ಅಭಿಷೇಕ್, ಯೋಗೇಶ್, ಅರ್ಶಿತ್, ಪೂಜಾ, ಮನೀಶ್, ನಿಶಾತ್, ಗ್ರಾ.ಪಂ ಸದಸ್ಯ ಕರೋಟಿ ಅನಿಲ್, ಶಾಲಾ ಎಸ್.ಡಿ.ಎಂ.ಸಿ. ಅಧ್ಯಕ್ಷ ಶೇಖರ್, ರೈತ ಮುಖಂಡರಾದ ಕರೋಟಿ ತಮ್ಮಯ್ಯ, ಪುಟ್ಟೇಗೌಡ, ಅಂಗಡಿ ರಮೇಶ್, ಅಂಗನವಾಡಿ ಕಾರ್ಯಕರ್ತೆಯರು ಸೇರಿದಂತೆ ಗ್ರಾಮದ ಮುಖಂಡರು, ಯುವಕರು ಉಪಸ್ಥಿತರಿದ್ದರು.

ಕನ್ನಡಪ್ರಭ

# ಶಾಲೆಗೆ ನವೀನ ಸ್ಪರ್ಶ ನೀಡಿದ ಬೆಂಗಳೂರಿನ ಭರವಸೆ ಬಳಗ




ಕೆ.ಆರ್.ಪೇಟೆ ತಾಲೂಕಿನ ಕರೋಟಿ ಸರ್ಕಾರಿ ಶಾಲೆಗೆ ಸುಣ್ಣ, ಬಣ್ಣದ ಮೂಲಕ ನವೀನ ಸ್ಪರ್ಶ ನೀಡಿದ ಭರವಸೆ ಬಳಗದ ಸದಸ್ಯರು.

**ಕೆ.ಆರ್.ಪೇಟೆ ತಾಲೂಕಿನ ಕರೋಟಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಕಟ್ಟಡಕ್ಕೆ ಸುಣ್ಣ ಬಣ್ಣ ಬಳಿದು ಸೇವಾಕಾರ್ಯ**

• **ಕನ್ನಡಪ್ರಭ ವಾರ್ತೆ** ಕೆ.ಆರ್.ಪೇಟೆ

69ನೇ ಕನ್ನಡ ರಾಜ್ಯೋತ್ಸವ ಹಾಗೂ ಹಿರಿಯ ನಟ ದಿ.ಶಂಕರ್‌ನಾಗ್ ಹುಟ್ಟುಹಬ್ಬದ ಪ್ರಯುಕ್ತ ತಾಲೂಕಿನ ಕರೋಟಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಕಟ್ಟಡಕ್ಕೆ ಬೆಂಗಳೂರಿನ ಭರವಸೆ ಬಳಗ ಹೊಸದಾಗಿ ಸುಣ್ಣ, ಬಣ್ಣ ಬಳಿದು ಹಾಗೂ ಸ್ವಾತ್ಯಂತ್ರಕ್ಕಾಗಿ ಹೋರಾಡಿದ ಮಹನೀಯರ ಭಾವಚಿತ್ರ ಬಿಡಿಸಿ ನವೀನ ಸ್ಪರ್ಶ ನೀಡಿದೆ.

ಭರವಸೆ ಬಳಗದ ಪ್ರಮುಖ ಸದಸ್ಯ ಸುನಿಲ್ ಗೌಡ ಮಾತನಾಡಿ, ಟ್ರಸ್ಟ್ ಮೂಲಕಹಲವುಸಮಾಜಮುಖಿಕಾರ್ಯಗಳನ್ನುರಾಜ್ಯಾದ್ಯಂತಹಮ್ಮಿಕೊಂಡಿದ್ದು, ಸರ್ಕಾರಿ ಶಾಲೆ ಉಳಿವಿಗಾಗಿ ಶಾಲೆಗಳಿಗೆ ಸುಣ್ಣ, ಬಣ್ಣವನ್ನು ಬಳಿಸುವ ಕಾಯಕ ಕೈಗೊಂಡಿದ್ದೇವೆ ಎಂದರು. ಶಾಲಾ ಮುಖ್ಯ ಶಿಕ್ಷಕ ಮಂಜೇಗೌಡ ಮಾತನಾಡಿ, ಸರ್ಕಾರದ ಜೊತೆಗೆ ಸಮಾಜ ಸೇವಕರು, ಭರವಸೆ ಟ್ರಸ್ಟ್‌ನಂತಹ ಸಂಘ, ಸಂಸ್ಥೆಗಳು ಸಹಕಾರ ನೀಡಿದರೆ ಶಾಲೆಗಳು ಅಭಿವೃದ್ಧಿಯಾಗಲು ಸಾಧ್ಯ ಎಂದು ತಿಳಿಸಿದರು.

ಮುಖಂಡ ಪುಟ್ಟೇಗೌಡ ಮಾತನಾಡಿ, ಗ್ರಾಮದ ಶಾಲಾ ಕಟ್ಟಡ ಕಳೆದ 15 ವರ್ಷದಿಂದ ಸುಣ್ಣಬಣ್ಣ ಕಾಣದೇ ಹಳೆಯದಾಗಿತ್ತು. ಬೆಂಗಳೂರಿನ ಭರವಸೆ ಬಳಗ ಸುಣ್ಣ, ಬಣ್ಣ ಬಳಿದು ಸರ್ಕಾರಿ ಶಾಲೆಯನ್ನು ಸುಂದರಗೊಳಿಸಿ ಹೊಸ ವಿನ್ಯಾಸ ನೀಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಮಕ್ಕಳನ್ನು ಆಕರ್ಷಿಸಲು ಕೆಲವೊಂದು ಬಣ್ಣ ಬಣ್ಣದ ಚಿತ್ತಾರವನ್ನು ಶಾಲೆ ಗೋಡೆ ಹಾಗೂ ಕಾಂಪೌಂಡ್ ಮೇಲೆ ಬಿಡಿಸಿದ್ದಾರೆ. ರಾಷ್ಟ್ರ ಮತ್ತು ರಾಜ್ಯದ ಮಹನೀಯರ ಭಾವಚಿತ್ರ ಸೇರಿ ಹಲವು ಚಿತ್ರ ಹಾಗೂ ಸಂದೇಶಗಳನ್ನು ಶಾಲೆ ಗೋಡೆ ಮೇಲೆ ಕುಂಚದಿಂದ ಸೃಷ್ಟಿಸಿದ ಭರವಸೆಯ ಬಳಗದ ಸದಸ್ಯರಿಗೆ ಗ್ರಾಮಸ್ಥರು, ಶಾಲಾ ಎಸ್.ಡಿ.ಎಂ.ಸಿ ವತಿಯಿಂದ ಅಭಿನಂದಿ ಸಲಾಯಿತು. ಎನ್ ಜಿಒ ಭರವಸೆ ಪ್ರಮುಖ ಸದಸ್ಯರಾದ ಅನುಷ, ಸುನಿಲ್,ಮಂಜೇಶ್, ಅಭಿಷೇಕ್, ಯೋಗೇಶ್, ಆರ್ಶಿತ್, ಪೂಜಾ, ಮನೀಶ್, ನಿಷತ್, ಗ್ರಾಪಂ ಸದಸ್ಯ ಅನಿಲ್, ಎಸ್ ಡಿಎಂಸಿ ಅಧ್ಯಕ್ಷ ಶೇಖರ್, ರೈತ ಮುಖಂಡ ಕರೋಟಿ ತಮ್ಮಯ್ಯ, ಪುಟ್ಟೇಗೌಡ, ರಮೇಶ್ ಇದ್ದರು.

ವಿಜಯವಾಣಿ
ನಂ.1 ಕನ್ನಡ ದಿನಪತ್ರಿಕೆ

# ಕರೋಟಿ ಸರ್ಕಾರಿ ಶಾಲೆಗೆ ಸುಣ್ಣ ಬಣ್ಣದ ಸಿಂಗಾರ

■ ವಿಜಯವಾಣಿ ಸುದ್ದಿಜಾಲ ಕಿಕ್ಕೇರಿ

» **ನೆರವಾದ ಭರವಸೆ ಬಳಗ ಸದಸ್ಯರು**

ಹಲವಾರು ವರ್ಷಗಳಿಂದ ಸುಣ್ಣ-ಬಣ್ಣವಿಲ್ಲದೆ ಮಾಸಿದ್ದ ಸಮೀಪದ ಕರೋಟಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಭರವಸೆ ಬಳಗದವರು ಶಾಲಾ ಕಟ್ಟಡಕ್ಕೆ ಸ್ವಯಂ ಪ್ರೇರಣೆಯಿಂದ ಸುಣ್ಣ ಬಣ್ಣ ಬಳಿದು, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾನೀಯರ ಭಾವಚಿತ್ರ ಚಿತ್ರ ಬಿಡಿಸಿ ಶಾಲೆಯ ಅಂದ ಹೆಚ್ಚಿಸಿದ್ದಾರೆ. ಭರವಸೆ ಬಳಗದ ಸದಸ್ಯ ಸುನೀಲ್‌ಗೌಡ ತಮ್ಮ ಭರವಸೆ ಟ್ರಸ್ಟ್ ಸದಸ್ಯರ ಸಹಕಾರದಿಂದ 69ನೇ ಕನ್ನಡ ರಾಜ್ಯೋತ್ಸವ ಹಾಗೂ ದಿ. ಶಂಕರನಾಗ್ ಹುಟ್ಟುಹಬ್ಬದ ಅಂಗವಾಗಿ ಭಾನುವಾರ ಈ ವಿನೂತನ ಕಾರ್ಯ ಮಾಡಿದ್ದಾರೆ.

ಗ್ರಾಮದ ಮುಖಂಡ ಪುಟ್ಟೇಗೌಡ ಮಾತನಾಡಿ, ತಮ್ಮ ಗ್ರಾಮದ ಶಾಲೆಯನ್ನು ಗುರುತಿಸಿ ಬಣ್ಣ ಬಳಿದು ಶಾಲೆ ಅಂದ ಹೆಚ್ಚಿಸಿದ್ದಾರೆ. ಮುಂದಿನ ವರ್ಷ ತಮ್ಮ ಶಾಲೆಗೆ ಮಕ್ಕಳು ಹೆಚ್ಚು ಸೇರಲು ಅನುಕೂಲವಾಗಲಿದೆ ಎಂದರು. ಶಾಲೆ ಆಕರ್ಷಿಸಲು ಬಣ್ಣ ಬಣ್ಣದ ಚಿತ್ತಾರ, ಮಹಾನೀಯರ ಭಾವಚಿತ್ರ, ಚಿತ್ರ ಸಂದೇಶ, ಪ್ರಮುಖ ಘಟನಾವಳಿಯಂತಹ ಉಪಯುಕ್ತ ಮಾಹಿತಿಯನ್ನು ಶಾಲೆ ಗೋಡೆ, ಕಾಂಪೌಂಡ್ ಮೇಲೆ ಬಿಡಿಸಲಾಗಿದೆ. ಈ ಕಾರ್ಯಕ್ಕೆ ಶಾಲಾ ಎಸ್‌ಡಿಎಂಸಿ ಸದಸ್ಯರು, ಗ್ರಾಮಸ್ಥರು ಭರವಸೆ ಬಳಗದ ಸದಸ್ಯರನ್ನು ಅಭಿನಂದಿಸಿದರು.

ಭರವಸೆ ಬಳಗದ ಅನುಷಾ, ಸುನಿಲ್, ಮಂಜೇಶ್, ಅಭಿಷೇಕ್, ಯೋಗೇಶ್, ಹರ್ಷಿತ್, ಪೂಜಾ, ಮನೀಶ್, ನಿಶಾಂತ್, ಗ್ರಾಪಂ. ಸದಸ್ಯ ಕರೋಟಿ ಅನಿಲ್, ಮುಖ್ಯ ಶಿಕ್ಷಕ ಮಂಜೇಗೌಡ, ಎಸ್‌ಡಿಎಂಸಿ ಅಧ್ಯಕ್ಷ ಶೇಖರ್, ಕರೋಟಿ ತಮ್ಮಯ್ಯ, ಪುಟ್ಟೇಗೌಡ, ಅಂಗಡಿ ರಮೇಶ್, ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮದ ಮುಖಂಡರು ಇದ್ದರು.

ವಿಜಯವಾಣಿ ಚಿತ್ರ



**ಕಿಕ್ಕೇರಿ ಸಮೀಪದ ಕರೋಟಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಭರವಸೆ ಬಳಗದವರು ಭಾನುವಾರ ಸುಣ್ಣಬಣ್ಣ ಹಚ್ಚಿ ಗ್ರಾಮಸ್ಥರ ಪ್ರಶಂಸೆಗೆ ಪಾತ್ರರಾದರು. ಸುನಿಲ್‌ಗೌಡ, ಮಂಜೇಗೌಡ, ತಮ್ಮಯ್ಯ, ಅನಿಲ್, ಶೇಖರ್ ಮತ್ತಿತರರಿದ್ದರು.**

# ಕರೋಟಿ ಸರ್ಕಾರಿ ಶಾಲೆಗೆ ಹೈಟೆಕ್ ಸ್ಪರ್ಶ ನೀಡಿದ 'ಭರವಸೆ'




ಕೆ.ಆರ್.ಪೇಟೆ: ತಾಲ್ಲೂಕಿನ ಕಸಬಾ ಹೋಬಳಿಯ ಕರೋಟಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಅನೇಕ ವರ್ಷಗಳಿಂದ ಸುಣ್ಣ-ಬಣ್ಣ ಕಾಣದೇ ಇದ್ದ ಶಾಲಾ ಕಟ್ಟಡಕ್ಕೆ 'ಭರವಸೆ ಟ್ರಸ್ಟ್'ನ ಪದಾಧಿಕಾರಿಗಳು ಸುಣ್ಣ-ಬಣ್ಣ ಹಾಗೂ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರ ಭಾವಚಿತ್ರಗಳನ್ನು ಮೂಡಿಸಿ ಸರ್ಕಾರಿ ಶಾಲೆಗೆ ಹೈಟೆಕ್ ಸ್ಪರ್ಶ ನೀಡಿದ್ದಾರೆ.

ಭರವಸೆ ಬಳಗದ ಪ್ರಮುಖ ಸದಸ್ಯ ಸುನಿಲ್ ಗೌಡ ಮಾತನಾಡಿ, ಭರವಸೆ ಟ್ರಸ್ಟ್ ಮೂಲಕ ಹಲವಾರು ಸಮಾಜಮುಖಿ ಕಾಯಕವನ್ನು ಕೈಗೊಳ್ಳಲಾಗುತ್ತಿದೆ. 69ನೇ ಕನ್ನಡ ರಾಜ್ಯೋತ್ಸವ ಹಾಗೂ ನಟ ಸಿ.ಶಂಕರ್ ನಾಗ್ ರವರ ಹುಟ್ಟುಹಬ್ಬದ ಪ್ರಯುಕ್ತ ಸರ್ಕಾರಿ ಶಾಲೆಯ ಉಳಿವಿಗಾಗಿ ಕರೋಟಿ ಗ್ರಾಮದ ಸರ್ಕಾರಿ ಶಾಲೆಗೆ ಸುಣ್ಣ ಬಣ್ಣವನ್ನು ಕೈಗೊಂಡಿದ್ದೇವೆ ಎಂದರು.

ಶಾಲಾ ಮುಖ್ಯ ಶಿಕ್ಷಕ ಮಂಜೇಗೌಡ ಮಾತನಾಡಿ, ಸರ್ಕಾರದ ಜೊತೆಗೆ ಸಮಾಜ ಸೇವಕರು, ಭರವಸೆ ಟ್ರಸ್ಟ್ ನಂತಹ ಸಂಘ ಸಂಸ್ಥೆಗಳು ಸಹಕಾರ ನೀಡಿದರೆ ಸರ್ಕಾರಿ ಶಾಲೆಗಳು ಮತ್ತಷ್ಟು ಅಭಿವೃದ್ಧಿ ಹೊಂದಲು ಸಾಧ್ಯವಿದೆ ಎಂದರು.

ಮುಖಂಡ ಪುಟ್ಟೇಗೌಡ, ಟ್ರಸ್ಟ್‌ನ ಸದಸ್ಯರುಗಳಾದ ಅನುಷಾ, ಸುನಿಲ್, ಮಂಜೇಶ್, ಅಭಿಷೇಕ್, ಯೋಗೇಶ್, ಆರ್ಶಿತ್, ಪೂಜಾ, ಮನೀಶ್,ನಿಷತ್, ಗ್ರಾ.ಪಂ ಸದಸ್ಯ ಕರೋಟಿ ಅನಿಲ್, ಎಸ್‌ಡಿಎಂಸಿ ಅಧ್ಯಕ್ಷ ಶೇಖರ್, ರೈತ ಮುಖಂಡರಾದ ಕರೋಟಿ ತಮ್ಮಯ್ಯ, ಅಂಗಡಿ ರಮೇಶ್, ಅಂಗನವಾಡಿ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

SAMYUKTA KARNATAKA
# ಸಂಯುಕ್ತ ಕರ್ನಾಟಕ
ಕನ್ನಡಿಗರ ಸಾಕ್ಷಿಪ್ರಜ್ಞೆ
ಶತಕದತ್ತ ಓಟ... ತೊಂಬತ್ತರ ನೋಟ

# ಸರ್ಕಾರಿ ಕಿರಿಯ ಶಾಲೆಗೆ ಬಳಗದಿಂದ ಸುಣ್ಣಬಣ್ಣ



**ಸಂ.ಕ. ಸಮಾಚಾರ, ಕಿಕ್ಕೇರಿ**

ಬೆಂಗಳೂರಿನ ಭರವಸೆ ಬಳಗದವರು ಅನೇಕ ವರ್ಷಗಳಿಂದ ಸುಣ್ಣ ಬಣ್ಣ ಕಾಣದೆ ಅಂದಗೆಟ್ಟಿದ ಸಮೀಪದ ಕರೋಟಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಕಟ್ಟಡಕ್ಕೆ ಸ್ವಯಂಪ್ರೇರಣೆಯಿಂದ ಸುಣ್ಣ ಬಣ್ಣ ಬಳಿದು, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾನೀಯರ ಭಾವಚಿತ್ರದ ಚಿತ್ತಾರ ಬಿಡಿಸಿ ಶಾಲೆಯ ಅಂದವನ್ನು ಹೆಚ್ಚಿಸಿದರು.

ಭರವಸೆ ಬಳಗದ ಸದಸ್ಯ ಸುನಿಲ್‌ಗೌಡ ಮಾತನಾಡಿ, ತಮ್ಮ ಭರವಸೆ ಟ್ರಸ್ಟ್ ಸದಸ್ಯರ ಸಹಕಾರದಿಂದ 69ನೇ ಕನ್ನಡ ರಾಜ್ಯೋತ್ಸವ ಹಾಗೂ ದಿ. ಶಂಕರನಾಗ್ ಹುಟ್ಟುಹಬ್ಬದ ಅಂಗವಾಗಿ ಈ ಕಾಯಕ ಮಾಡಲಾಗಿದೆ. ಸರ್ಕಾರಿ ಶಾಲೆ ಉಳಿಸುವುದು ಎಲ್ಲರ ಹೊಣೆ ಎಂದರು.

ಮುಖಂಡ ಪುಟ್ಟೇಗೌಡ ಮಾತನಾಡಿ, ತಮ್ಮ ಕುಗ್ರಾಮ. ಶಾಲೆಯನ್ನು ಗುರ್ತಿಸಿ ಭರವಸೆ ಟ್ರಸ್ಟ್ ಶಾಲೆ ಅಂದವನ್ನು ಬಣ್ಣದ ಮೂಲಕ ಹೆಚ್ಚಿಸಿದ್ದಾರೆಂದರು.

ಶಾಲೆಗೆ ಆಕರ್ಷಿಸಲು ಬಣ್ಣ ಬಣ್ಣದ ಚಿತ್ತಾರ, ಮಹನೀಯರ ಭಾವಚಿತ್ರ, ಚಿತ್ರ ಸಂದೇಶ, ಪ್ರಮುಖ ಘಟನಾವಳಿಯಂತಹ ಉಪಯುಕ್ತ ಮಾಹಿತಿ ಶಾಲೆ ಗೋಡೆ, ಕಾಂಪೌಂಡ್ ಮೇಲೆ ಬಿಡಿಸಿರುವುದನ್ನು ಕಂಡು ಶಾಲಾ ಎಸ್‌ಡಿಎಂಸಿ ಸದಸ್ಯರು, ಗ್ರಾಮಸ್ಥರು ಗ್ರಾಮದ ಪರವಾಗಿ ಬಳಗದ ಸದಸ್ಯರನ್ನು ಅಭಿನಂದಿಸಲಾಯಿತು.

ಭರವಸೆ ಬಳಗದ ಅನುಷಾ, ಸುನಿಲ್, ಮಂಜೇಶ್, ಅಭಿಷೇಕ್, ಯೋಗೇಶ್, ಹರ್ಷಿತ್, ಪೂಜಾ, ಮನೀಶ್, ನಿಶಾಂತ್, ಗ್ರಾಪಂ. ಸದಸ್ಯ ಕರೋಟಿ ಅನಿಲ್, ಮುಖ್ಯ ಶಿಕ್ಷಕ ಮಂಜೇಗೌಡ, ಎಸ್‌ಡಿಎಂಸಿ ಅಧ್ಯಕ್ಷ ಶೇಖರ್, ಕರೋಟಿ ತಮ್ಮಯ್ಯ, ಪುಟ್ಟೇಗೌಡ, ಅಂಗಡಿ ರಮೇಶ್ ಇದ್ದರು.

# ಪರಿಸರಕ್ಕೆ ನಾವು ಕೊಡುಗೆ ನೀಡಬೇಕು

**ವಿಕ ಸುದ್ದಿಲೋಕ** ಮಾಗಡಿ

ಮನುಷ್ಯನ ಸ್ವಾರ್ಥಕ್ಕೆ ಪರಿಸರವನ್ನು ನಾಶ ಮಾಡಿದ್ದು ಈಗ ಪರಿಸರಕ್ಕೆ ನಾವು ಕೊಡುಗೆ ಕೊಡುವ ಕೆಲಸ ಮಾಡಬೇಕಿದ್ದು ತಮ್ಮ ಸುತ್ತಲಿನ ಪರಿಸರದಲ್ಲಿ ಸಸಿಗಳನ್ನು ಬೆಳೆಸಿ ಪೋಷಿಸುವ ಕೆಲಸ ಆಗಬೇಕಿದೆ ಎಂದು ಚಕ್ರಬಾವಿ ಮರಳು ಸಿದ್ದೇಶ್ವರ ಮಠದ ಅಧ್ಯಕ್ಷ ಸಿದ್ದಲಿಂಗ ಸ್ವಾಮೀಜಿ ಹೇಳಿದರು.

ತಾಲೂಕಿನ ಮರಳುದೇವನಹಳ್ಳಿ ಪುರದ ಲಕ್ಷ್ಮೀದೇವಿ ದೇವಸ್ಥಾನದ ಆವರಣದಲ್ಲಿ ಭಾನುವಾರ ಗ್ರಾಮ ಮತ್ತು ನಗರ ಸಬಲೀಕರಣ ಸಮಿತಿ ಹಾಗೂ ಸ್ಥಳೀಯರ ಸಹಕಾರದಿಂದ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಸಾಲುಮರದ ತಿಮ್ಮಕ್ಕನವರು ನಮ್ಮ ತಾಲೂಕಿನವರು ಎಂದು ಹೆಮ್ಮೆಯಿಂದ ಹೇಳಬಹುದು. ಅವರು ಮರಗಳನ್ನು ತಮ್ಮ ಮಕ್ಕಳಂತೆ ಪೋಷಣೆ ಮಾಡಿ ಈಗ ಇಡೀ ವಿಶ್ವವೇ ಅವರತ್ತ ನೋಡುವಂತೆ ಮಾಡಿದ್ದಾರೆ. ಯುವಕರೆಲ್ಲರೂ ಸೇರಿಕೊಂಡು ಕಾರ್ಯಕ್ರಮ ಮಾಡುತ್ತಿರುವುದು ಹೆಮ್ಮೆಯ ವಿಚಾರವಾಗಿದೆ. ಪರಿಸರಕ್ಕೆ ಹಾನಿಯಾಗದಂತೆ ನಾವು ಹೆಚ್ಚು ಪ್ಲಾಸ್ಟಿಕ್ ವಸ್ತುಗಳನ್ನು ಬಳಸದೆ ಪರಿಸರಕ್ಕೆ ಸ್ನೇಹವಾಗಿರುವ ಪದಾರ್ಥಗಳನ್ನು ಹೆಚ್ಚು ಬಳಸಿ ಪರಿಸರವನ್ನು ಉಳಿಸುವ ಕೆಲಸ ಮಾಡಬೇಕು. ದೇವಸ್ಥಾನದ ಸುತ್ತಲೂ ಹಣ್ಣಿನ ಗಿಡಗಳನ್ನು ಹಾಕುವ ಮೂಲಕ ಮುಖ ಪ್ರಾಣಿಗೆ ಆಹಾರ ನೀಡುವ ಕೆಲಸ ಮಾಡಲಾಗುತ್ತಿದೆ ಎಂದು ತಿಳಿಸಿದರು.



ಮಾಗಡಿ ತಾಲೂಕಿನ ಮರಳುದೇವನಪುರದ ಲಕ್ಷ್ಮೀದೇವಿ ದೇವಸ್ಥಾನದ ಆವರಣದಲ್ಲಿ ನಾನಾ ಸೇವಾ ಸಂಘದ ವತಿಯಿಂದ ನಡೆದ ಸಸಿ ನೆಡುವ ಕಾರ್ಯಕ್ರಮಕ್ಕೆ ಚಕ್ರಬಾವಿ ಮರಳು ಸಿದ್ದೇಶ್ವರ ಮಠದ ಸಿದ್ದಲಿಂಗ ಸ್ವಾಮೀಜಿ ಚಾಲನೆ ನೀಡಿದರು.

ವಿದ್ಯಾರ್ಥಿ ಮಿತ್ರ ರವಿಕಿರಣ್ ಮಾತನಾಡಿ, ಸಾಲು ಮರದ ತಿಮ್ಮಕ್ಕಜ್ಜಿಯ ಆಯುಷ್ಯ ವೃದ್ಧಿಗಾಗಿ ಮತ್ತು ಮಾಗಡಿ ಕೆಂಪೇಗೌಡರ ನೆನಪಿನಲ್ಲಿ 200 ಹಣ್ಣಿನ ಗಿಡಗಳನ್ನು ಪ್ರಾಣಿ ಪಕ್ಷಿಗಳ ಆಹಾರಕ್ಕೆ ನೆರವಾಗಲು ಹಣ್ಣಿನ ಗಿಡಗಳನ್ನು ಬೆಳೆಸುತ್ತಿದ್ದು ಈ ಕಾರ್ಯಕ್ರಮವನ್ನು ತಾಲೂಕಿನ ಎಲ್ಲಾ ಸರಕಾರಿ ಶಾಲೆಗಳಲ್ಲೂ ಅಭಿಯಾನ ಮುಂದುವರಿಯುತ್ತಿದೆ. ಕಳೆದ 3 ವರ್ಷಗಳಿಂದ ಈ ಅಭಿಯಾನ ನೆಡೆಯುತ್ತಾ ಬಂದಿದ್ದೆ, ಮೂಕ ಪಕ್ಷಿಗಳಿಗೆ ನೇರವಾಗಲು ಈ ಅಭಿಯಾನ ಅವಶ್ಯಕವಾಗಿದೆ. ಈ ಕಾರ್ಯಕ್ರಮಕ್ಕೆ ಬೆಂಗಳೂರಿನಿಂದ ಆಗಮಿಸಿರುವ ಭರವಸೆ ತಂಡ, ನಮ್ಮ ಮಾಗಡಿ ತಂಡ, ಕರ್ನಾಟಕ ಬಲ ಸೇನೆ ತಂಡ, ನನ್ ಮಿನಿ ರೇಡಿಯೋ ತಂಡ, ಮಾಗಡಿ ರೈತ ಸಂಘದ ಪದಾಧಿಕಾರಿಗಳು ಮೂಲಕ ದೊಡ್ಡ ಅಭಿಯಾನ ಕಾರ್ಯಕ್ರಮ ಮಾಡಲಾಗುತ್ತಿದ್ದು, ಸಾರ್ವಜನಿಕರು ಕಾರ್ಯಕ್ರಮಕ್ಕೆ ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ರೈತ ಮುಖಂಡ ನರಸಿಂಹಮೂರ್ತಿ ಮಾತನಾಡಿ, ಯುವಕರು ಬೆಂಗಳೂರಿನಿಂದ ರಜಾ ದಿನಗಳಲ್ಲಿ ಸಸಿಗಳನ್ನು ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಕೊಡುಗೆ ನೀಡಬೇಕಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಗ್ರಾಮಸ್ಥರು ಹಾಗೂ ವಿವಿಧ ಸ್ವಯಂಸೇವಾ ಸಂಘದ ಸದಸ್ಯರು ಭಾಗವಹಿಸಿದ್ದರು.

ಜನದನಿಯ ಸಾರಥಿ
ವಾರ್ತಾ ಭಾರತಿ

# ಲಿಂಗತ್ವ ಅಲ್ಪಸಂಖ್ಯಾತರು, ಮಕ್ಕಳು, ವೃದ್ಧರು, ಶಾಲೆಗಳಿಗೆ 'ಭರವಸೆ'ಯ ಕಿರಣ

■ ಯೋಗೇಶ್ ಮಲ್ಲೂರು

ಬೆಂಗಳೂರು: 'ಸಮಾಜದ ಪ್ರಗತಿ ಯುವಜನರಿಂದಲೇ ಸಾಧ್ಯ' ಎಂಬ ಸ್ವಾಮಿ ವಿವೇಕಾನಂದರ ಮಾತಿನಂತೆ ಇಲ್ಲೊಂದು ಯುವ ಸಮುದಾಯ 'ಭರವಸೆ' ಎಂಬ ತಂಡ ಕಟ್ಟಿಕೊಂಡು ವಯೋವೃದ್ಧರು, ಕೊಳಗೇರಿ ಪ್ರದೇಶದ ಮಕ್ಕಳು, ಲಿಂಗತ್ವ ಅಲ್ಪಸಂಖ್ಯಾತರು ಹಾಗೂ ಸರಕಾರಿ ಶಾಲೆಗಳಿಗೆ ಭರವಸೆಯ ಕಿರಣವಾಗಿ ಸಮಾಜಮುಖಿ ಕಾರ್ಯದಲ್ಲಿ ತೊಡಗಿದೆ.

ಬಡ ಮಕ್ಕಳಿಗೆ ವಿದ್ಯಾಭ್ಯಾಸ, ಸರಕಾರಿ ಶಾಲೆಗಳಿಗೆ ಸುಣ್ಣ-ಬಣ್ಣ, ಅನಾಥಾಶ್ರಮದ ಮಕ್ಕಳಿಗೆ ಹಾಗೂ ವಯೋವೃದ್ಧರಿಗೆ ಆರೋಗ್ಯ ಶಿಬಿರ, ಬ್ಲಡ್ ಕ್ಯಾನ್ಸರ್ ಬಗೆಗೆ ಜಾಗೃತಿ ಶಿಬಿರ, ಬಡಮಕ್ಕಳಿಗೆ ಕ್ರೀಡಾಕೂಟ ಆಯೋಜನೆ, ಬೀದಿಬದಿ ವ್ಯಾಪಾರಿಗೆ ಹಾಗೂ ಹಸಿದವರಿಗೆ ಊಟ, ವನ್ಯಜೀವಿ ರಕ್ಷಣೆ ಜಾಗೃತಿ, ಪರಿಸರ ಸಂರಕ್ಷಣಾ ಜಾಗೃತಿಗಳು, ಪ್ಲಾಸ್ಟಿಕ್ ಬದಲಿಗೆ ಪೇಪರ್ ಅಥವಾ ಬಟ್ಟೆ ಬ್ಯಾಗ್ ವಿತರಣೆ. ಹೀಗೆ ತಂಡದ ಭರವಸೆ ಕೆಲಸಗಳ ಪಟ್ಟಿ ಬೆಳೆಯುತ್ತಲೇ ಇವೆ.

ತಾನೊಬ್ಬನೇ ಬೆಳೆಯುವ ಜತೆಗೆ ಸುತ್ತಲಿನವರನ್ನೂ ಬೆಳೆಸುವ ಆಲೋಚನೆಯಿಂದ 2019ರ ಡಿಸೆಂಬರ್‌ನಲ್ಲಿ ಮೂವರಿಂದ ಹುಟ್ಟಿಕೊಂಡ 'ಭರವಸೆ' ತಂಡವು ಈಗ 40 ಜನರ ಖಾಯಂ ಸದಸ್ಯತ್ವ ಹೊಂದಿದೆ. ಜತೆಗೆ ವಿವಿಧ ಕಾರ್ಯಕ್ರಮಗಳ ಸಂದರ್ಭದಲ್ಲಿ ಸ್ವಯಂ ಸೇವಕರಾಗಿ 2,000ಕ್ಕೂ ಹೆಚ್ಚು ಯುವಜನರು ಭಾಗಿಯಾಗುತ್ತಾರೆ.

'ಭರವಸೆ' ಪ್ರಾರಂಭವಾದ ಮೊದಲ ದಿನಗಳಲ್ಲಿ ಅನಾಥಾಶ್ರಮದಲ್ಲಿನ ಮಕ್ಕಳು ಮತ್ತು ವೃದ್ಧಾಶ್ರಮದಲ್ಲಿನ ವೃದ್ಧರನ್ನು ಭೇಟಿ ಮಾಡಿದಂತಹ ವೇಳೆ, ಅವರಿಗೆ ಹಣದ ಅವಶ್ಯಗಳಿಗಿಂತ ಅವರೊಟ್ಟಿಗೆ ಕಳೆಯುವ ಅಮೂಲ್ಯವಾದ ಸಮಯಕ್ಕೆ ಹೆಚ್ಚಿನ ಬೆಲೆ ಎಂದು ತಿಳಿಯಿತು ತದನಂತರ, ನಮ್ಮ ಸಮಾಜ ಸೇವೆ ಒಂದೊಂದಾಗಿ ಮುಂದುವರಿಯಿತು ಎನ್ನುತ್ತಾರೆ 'ಭರವಸೆ' ತಂಡದ ಸಂಸ್ಥಾಪಕ ಸುನೀಲ್ ಕುಮಾರ್ ಎಂ.

ತಂಡದ ಕೆಲಸಗಳಿಗೆ ಯಾವುದೇ ಅನುದಾನ, ಫಂಡ್ ಪಡೆಯುವುದಿಲ್ಲ, ಬದಲಾಗಿ ನಮ್ಮ ಖಾಯಂ ಸದಸ್ಯರ ತಿಂಗಳ ವೇತನದಲ್ಲಿ ಇಂತಿಷ್ಟು ಹಣ ಮೀಸಲಿಟ್ಟುಕೊಂಡು ಕೆಲಸಗಳಿಗೆ ಉಪಯೋಗಿಸುತ್ತೇವೆ. ಒಂದು ವೇಳೆ ಹೆಚ್ಚಿನ ಖರ್ಚು ಸಂಭವಿಸುವಲ್ಲಿ ಸ್ವಯಂ ಸೇವಕರಿಗೆ ಈ ಬಗ್ಗೆ ಮಾಹಿತಿ ನೀಡುತ್ತೇನೆ. ಅವರು ತಮ್ಮ ಕೈಲಾದಷ್ಟು ಸಹಕರಿಸುವ ಮೂಲಕ ಕೆಲಸ ಪೂರ್ಣಗೊಳಿಸಲಾಗುವುದು. ಒಂದು ವರ್ಷದಿಂದ 9 ಸಾವಿರದಷ್ಟು ಪೇಪರ್ ಬ್ಯಾಗ್, 3 ಸಾವಿರದಷ್ಟು ಬಟ್ಟೆ ಬ್ಯಾಗ್‌ಗಳನ್ನು ಉಚಿತವಾಗಿ ವಿತರಿಸಲಾಗಿದೆ ಎಂದು ಸುನೀಲ್‌ಕುಮಾರ್ ಹೇಳುತ್ತಾರೆ.





## ಸರಕಾರಿ ಶಾಲೆಗಳಿಗೆ ಸುಣ್ಣ-ಬಣ್ಣ

ಸರಕಾರಿ ಶಾಲೆಗಳಿಗೆ ಉಚಿತ ಸುಣ್ಣ-ಬಣ್ಣ ಮತ್ತು ಗೋಡೆಗಳ ಮೇಲೆ ವಿವಿಧ ಚಿತ್ರಗಳನ್ನು ಮತ್ತು ಶಿಕ್ಷಣದ ಮಾಹಿತಿಯನ್ನು ಬಣ್ಣಗಳಲ್ಲಿ ಚಿತ್ರಿಸಿ, ಶಾಲೆಯ ಗೋಡೆ ಮತ್ತು ಕಾಂಪೌಂಡ್ ಅನ್ನು ಸುಂದರಗೊಳಿಸುವ ಮೂಲಕ ಮಕ್ಕಳ ಶಾಲೆಗೆ ಬರಲು ಹೊಸ ಚೈತನ್ಯವನ್ನು ತುಂಬಲಾಗುವುದು. ಈವರೆಗೆ ಬೆಂಗಳೂರಿನ ಉತ್ತರಹಳ್ಳಿ, ಶ್ರೀರಾಂಪುರ, ಕಾಮಾಕ್ಷಿಪಾಳ್ಯ, ತೋಟದಗುಡ್ಡದಹಳ್ಳಿ, ಕೋರಮಂಗಲ, ಮೆಜೆಸ್ಟಿಕ್ ಹಾಗೂ ತುಮಕೂರು ನಗರ, ಕುಣಿಗಲ್, ಚಿಕ್ಕಬಳ್ಳಾಪುರದ ಶಿಡ್ಲಘಟ್ಟ, ಶಿವಮೊಗ್ಗ, ಶೃಂಗೇರಿ, ಬಾಗಲಕೋಟೆ ಸಹಿತ 20ಕ್ಕೂ ಹೆಚ್ಚು ಸರಕಾರಿ ಶಾಲೆಗಳಿಗೆ ಈ ಕೆಲಸಗಳನ್ನು ಮಾಡಿದ್ದೇವೆ ಎಂದು ಹೇಳುತ್ತಾರೆ ಸುನೀಲ್ ಕುಮಾರ್.




## ಹಸಿದವರಿಗೆ ಭರವಸೆಯ ಬುತ್ತಿ

ಸಮಾಜದಲ್ಲಿ ಒಂದೊತ್ತಿನ ಊಟವಿಲ್ಲದೇ, ಅನೇಕ ಮಂದಿ ಸಾವನ್ನಪ್ಪುತ್ತಿದ್ದಾರೆ, ಫುಟ್ ಪಾತ್‌ಗಳಲ್ಲಿ ಹಸಿವಿನ ಯಾತನೆ ಪಡುತ್ತಿದ್ದಾರೆ. ಹೀಗಾಗಿ ಬೀದಿಬದಿ ವ್ಯಾಪಾರಿಗಳು, ಬುದ್ಧಿಮಾಂದ್ಯರು, ಫುಟ್‌ಪಾತ್ ನಲ್ಲಿರುವವರು, ಲಿಂಗತ್ವ ಅಲ್ಪಸಂಖ್ಯಾತರಿಗೆ ಹೀಗೆ ಹಸಿವಿನಿಂದ ಬಳಲುತ್ತಿರುವವರಿಗೆ ವಾರಕ್ಕೆ ಒಮ್ಮೆ ಸುಮಾರು 30 ಜನಕ್ಕೆ ಊಟ ವಿತರಿಸುವ ಕೆಲಸ ಮಾಡುತ್ತಿದ್ದೇವೆ ಎಂದು ಸುನೀಲ್ ಕುಮಾರ್ ಹೇಳಿದ್ದಾರೆ.

> ಗೌರಿ-ಗಣೇಶ, ವರಮಹಾಲಕ್ಷ್ಮಿ, ಯುಗಾದಿ ಹೀಗೆ ಹಬ್ಬದ ಸಂದರ್ಭದಲ್ಲಿ ಅನಾಥ ಹೆಣ್ಣುಮಕ್ಕಳು, ಲಿಂಗತ್ವ ಅಲ್ಪಸಂಖ್ಯಾತರಿಗೆ ಹೊಸ ಉಡುಗೆಗಳು, ಉಡುಗೊರೆ ಹಾಗೂ ಬಾಗಿನ ನೀಡುವ ಮೂಲಕ ಅವರಲ್ಲಿನ ಅನಾಥಪ್ರಜ್ಞೆಯನ್ನು ಅಳಿಸುವ ಪ್ರಯತ್ನ ಮಾಡುತ್ತೇನೆ. ಅವರ ಜತೆಗೆ ನಾವಿದ್ದೇವೆ ಎಂದು ಭರವಸೆ ಮೂಡಿಸುವ ಮೂಲಕ ಹಬ್ಬಗಳನ್ನು ಆಚರಿಸುತ್ತೇವೆ.
>
> ■ ಸುನೀಲ್ ಕುಮಾರ್ ಎಂ., 'ಭರವಸೆ' ತಂಡದ ಸಂಸ್ಥಾಪಕ

## ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ

ಕೋವಿಡ್ ಸೋಂಕಿನ ಸಮಯದಲ್ಲಿ ಸರಕಾರಿ ಶಾಲೆಗಳಿಗೆ ಹೋಗುತ್ತಿದ್ದ ಸ್ಲಂ ಮಕ್ಕಳಿಗೆ ಆನ್‌ಲೈನ್ ಕ್ಲಾಸ್‌ನಲ್ಲಿ ಭಾಗಿಯಾಗಲು ಸಾಧ್ಯವಾಗದೇ ಶಿಕ್ಷಣದಿಂದ ದೂರ ಉಳಿದಿದ್ದರು. ಆ ವೇಳೆ ಬೆಂಗಳೂರು ನಗರದಲ್ಲಿನ ಕೊಳಗೇರಿ ಪ್ರದೇಶಗಳಿಗೆ 'ಭರವಸೆ' ತಂಡ ಭೇಟಿ ನೀಡುವ ಮೂಲಕ ಅಲ್ಲಿನ ಮಕ್ಕಳಿಗೆ ಶಿಕ್ಷಣ ನೀಡಿತ್ತು.

ಈಗ 8ರಿಂದ 10ನೇ ತರಗತಿ ಓದುತ್ತಿರುವ 25 ಮಕ್ಕಳ ಸಂಪೂರ್ಣ ಶಿಕ್ಷಣದ ವೆಚ್ಚವನ್ನು ನೋಡಿಕೊಳ್ಳಲಾಗುತ್ತಿದ್ದು, ವಾರಾಂತ್ಯದ ವೇಳೆ 80 ಸ್ಲಂ ಮಕ್ಕಳಿಗೆ ಶಿಕ್ಷಣ ಹೇಳಿಕೊಡಲಾಗುತ್ತದೆ. ಜತೆಗೆ ಮೂರು ಶಾಲೆಯ 150ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಗಣಿತ, ವಿಜ್ಞಾನ ಹಾಗೂ ಇಂಗ್ಲಿಷ್ ಪಠ್ಯವನ್ನು ಕಲಿಸಲಾಗುತ್ತಿದೆ. ಜತೆಗೆ ಕಂಪ್ಯೂಟರ್ ಶಿಕ್ಷಣವನ್ನು ಹೇಳಿಕೊಡಲಾಗುತ್ತದೆ.

ಪ್ರಜಾವಾಣಿ



## ಪ್ರಶಸ್ತಿ ಪ್ರದಾನ

ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ನಗರದಲ್ಲಿ ಶನಿವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅಶ್ವತ್ಥ ನಾರಾಯಣ ಕಂಟನಕುಂಟೆ ಮತ್ತು ಪೂಜಾ ರಂಗನಾಥ್ ಅವರಿಗೆ ಪುನೀತ್ ರಾಜ್‌ಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿ, ಬರಹಗಾರರಾದ ಸದಾಶಿವ ಡಿ.ಓ. ಮತ್ತು ಮಧು ಕಾರಗಿ ಅವರಿಗೆ ಪುನೀತ್ ರಾಜ್‌ಕುಮಾರ್ ಯುವ ಸಾಹಿತ್ಯ ದತ್ತಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಟ್ರಸ್ಟ್ ಅಧ್ಯಕ್ಷ ಎಸ್. ರಾಮಲಿಂಗೇಶ್ವರ, ಗಾಯಕ ವಾಸುದೇವ್ ಹೊಸಹಳ್ಳಿ, ಶಿಕ್ಷಣ ತಜ್ಞೆ ಗೀತಾ ರಾಮಾನುಜಂ, ಉದ್ಯಮಿ ಶಶಿಕಾಂತ್ ರಾವ್, ಚಿಂತಕ ಲಕ್ಷ್ಮೀಪತಯ್ಯ, ಲೇಖಕಿ ಜಯಶ್ರೀ ರಾಜು ಮತ್ತು ಭರವಸೆ ತಂಡದ ಸುನಿಲ್ ಭಾಗವಹಿಸಿದ್ದರು - ಪ್ರಜಾವಾಣಿ ಚಿತ್ರ

ಸಮಸ್ತ ಕನ್ನಡಿಗರ ಏಕೈಕ ಸಂಜೆ ದಿನಪತ್ರಿಕೆ
# ಈ ಸಂಜೆ



ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ನಗರದ ನಯನ ಸಭಾಂಗಣದಲ್ಲಿಂದು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕಲಾವಿದ ಅಶ್ವತ್ಥ್ ನಾರಾಯಣ ಕಂಟನಕೋಟೆ ಹಾಗೂ ನೃತ್ಯಗಾರ್ತಿ ಪೂಜಾ ರಂಗನಾಥ್ ಅವರಿಗೆ ಪುನೀತ್ ರಾಜ್‌ಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿ ಮತ್ತು ಯುವ ಸಾಹಿತಿ ಸದಾಶಿವ ಡಿ.ಓ. ಹಾಗೂ ಕವಯಿತ್ರಿ ಮಧು ಕಾರಗಿ ಅವರಿಗೆ ಪುನೀತ್ ರಾಜ್‌ಕುಮಾರ್ ಯುವ ಸಾಹಿತ್ಯ ದತ್ತಿ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಸಾಹಿತಿ, ಉದ್ಯಮಿ ಶಶಿಕಾಂತ್‌ರಾವ್, ಶಿಕ್ಷಣ ತಜ್ಞರಾದ ಡಾ.ಗೀತಾ ರಾಮಾನುಜಂ, ಗಾಯಕ ವಾಸುದೇವ್ ಹೊಸಹಳ್ಳಿ, ಡಾ.ರಾಮಲಿಂಗೇಶ್ವರ ಮತ್ತಿತರರಿದ್ದರು.

# 25 ಕ್ಕೆ ಪುನೀತ್ ರಾಜಕುಮಾರ್ ಸಂಸ್ಕೃತಿ ಮತ್ತು ಸಾಹಿತ್ಯ ದತ್ತಿ ಪ್ರಶಸ್ತಿ ಪ್ರದಾನ

ಬೆಂಗಳೂರು : ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಕೊಡಮಾಡುವ ಸಾಹಿತಿ, ಸಮಾಜ ಸೇವಕರಾದ ಶ್ರೀ ಶಶಿಕಾಂತ್ ರಾವ್ ಅವರು ನೀಡಿರುವ 2024 ರ ಸಾಲಿನ ಪುನೀತ್ ರಾಜಕುಮಾರ್ ಸಂಸ್ಕೃತಿ ಮತ್ತು ಸಾಹಿತ್ಯ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭವು ಬೆಂಗಳೂರಿನ ಕನ್ನಡ ಭವನದ ನಯನ ಸಭಾಂಗಣದಲ್ಲಿ 25ರ ಬೆಳಗ್ಗೆ 11ಗಂಟೆಗೆ ನಡೆಯಲಿದೆ.

ಖ್ಯಾತ ಶಿಕ್ಷಣ ತಜ್ಞರೂ, ಚಿಂತಕರಾದ ಡಾ.ಗೀತಾ ರಾಮಾನುಜಂ ಅವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹಿರಿಯ ಜಾನಪದ ಕಲಾವಿದರಾದ ಅರವತ್ತರ ಸಂವತ್ಸರದ ಕಂಟನಕುಂಟೆ ಅಶ್ವತ್ಥ್ ನಾರಾಯಣ, ಹಾಗೂ ಸಾಮಾಜಿಕ ಕಾರ್ಯಕರ್ತೆ ಬೆಂಗಳೂರಿನ ಕು.ಪೂಜಾರಂಗನಾಥ್ ಅವರಿಗೆ ಪುನೀತ್ ರಾಜಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿಯನ್ನು, ಯುವ ಸಾಹಿತಿಗಳಾದ ಚಿತ್ರದುರ್ಗ ಜಿಲ್ಲೆಯ ಡಿ.ಓ.ಸದಾಶಿವ ಸಂಕಲ್ಪ ಮತ್ತು ಹಾವೇರಿ ಜಿಲ್ಲೆಯ ಕು. ಮಧು ಕಾರಗಿ ಅವರಿಗೆ ಪುನೀತ್ ರಾಜಕುಮಾರ್ ಸಾಹಿತ್ಯ ದತ್ತಿ ಪ್ರಶಸ್ತಿಯನ್ನು ಪ್ರದಾನ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಜಂಟಿ ನಿಬಂಧಕರು ಹಾಗೂ ಕಾರ್ಯದರ್ಶಿಗಳಾದ ಶ್ರೀ ಲಕ್ಷ್ಮೀಪತಯ್ಯ ನವರು, ಹಳ್ಳಿ ಜನಪದ ತಂಡದ ಸ್ಥಾಪಕರಾದ ಗಾಯಕ ಶ್ರೀ ಹೊಸಹಳ್ಳಿ ವಾಸುದೇವ್ ಅವರು ಭಾಗವಹಿಸಲಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ದತ್ತಿ ದಾನಿಗಳು ಹಾಗೂ ಸಾಹಿತಿಗಳಾದ ಶ್ರೀ ಶಶಿಕಾಂತ್ ರಾವ್ ಅವರು ವಹಿಸಲಿದ್ದಾರೆ.

ಸಮಾರಂಭದಲ್ಲಿ ಬಿಬಿಜಿಎಸ್ ಟ್ರಸ್ಟ್ ನ ಅಧ್ಯಕ್ಷರಾದ ಡಾ.ಎಸ್. ರಾಮಲಿಂಗೇಶ್ವರ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದು , ವೇದಿಕೆಯಲ್ಲಿ ಭರವಸೆ ತಂಡದ ಸುನಿಲ್, ಮಂಜೇಶ್ ಇರಲಿದ್ದಾರೆ. ಇದೇ ಸಂದರ್ಭ ದಲ್ಲಿ ವಿಶೇಷ ಕವಿಗೋಷ್ಠಿ ನಡೆಯಲಿದ್ದು ಅಧ್ಯಕ್ಷತೆಯನ್ನು ಕವಯಿತ್ರಿ ಜಯಶ್ರೀ ರಾಜು ವಹಿಸುವರು, ಕವಿಗೋಷ್ಠಿಯಲ್ಲಿ ಕೆ.ಎಂ.ರೇವಣ್ಣ, ಕೃಷ್ಣಹಾನ್ ಬಾಳ್, ಎಂ.ಎಸ್.ಆಶಾಲತಾ, ಅಂಬುಜಾಕ್ಷಿ ಪ್ರಕಾಶ್, ಶಾಂತಿ ವಾಸು, ಚಿನ್ನುಪ್ರಕಾಶ್ ಶ್ರೀರಾಮನಹಳ್ಳಿ ಮುಂತಾದವರು ಸ್ವರಚಿತ ಕವನ ವಾಚಿಸುವರು, ಹಳ್ಳಿ ಜನಪದ ಕಲಾವಿದರಿಂದ ಸುಗಮ ಸಂಗೀತ ಕಾರ್ಯಕ್ರಮ ನಡೆಯಲಿದೆ ಎಂದು ಟ್ರಸ್ಟ್ ನ ಕಾರ್ಯದರ್ಶಿ ಸಿ. ಹೇಮಾವತಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

THURSDAY, 23-05-2024
ಗುರುವಾರ, 23-05-2024
VOLUME : 9 | Pages: 4
ISSUE : 135 | Price : 1
ಸಂಪುಟ : 9 | ಪುಟಗಳು: 4
ಸಂಚಿಕೆ : 135 | ಬೆಲೆ: 1 ರೂಪಾಯಿ
EDITOR: UMA .M
HOSA ADARSHA DINA PATRIKE ■ ರಾಮನಗರ ■ ಬೆಂಗಳೂರು ಗ್ರಾಮಾಂತರ ■ RNI - KARKAN/2015/65946 - KA/BG/CNA/108/2022 - 24
ಹೊಸ ಆದರ್ಶ
ಸಂಪಾದಕಿ: ಉಮಾ.ಎಂ
ಕನ್ನಡ ದಿನ ಪತ್ರಿಕೆ
Hosaadarsha@gmail.com
Phone: 7022717268, 9141695728, 9986532122

# 25ಕ್ಕೆ ಪುನೀತ್ ರಾಜಕುಮಾರ್ ಸಂಸ್ಕೃತಿ ಮತ್ತು ಸಾಹಿತ್ಯ ದತ್ತಿ ಪ್ರಶಸ್ತಿ ಪ್ರದಾನ

**ಬೆಂಗಳೂರು :** ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಕೊಡಮಾಡುವ ಸಾಹಿತಿ, ಸಮಾಜ ಸೇವಕರಾದ ಶ್ರೀ ಶಶಿಕಾಂತ್ ರಾವ್ ಅವರು ನೀಡಿರುವ 2024 ರ ಸಾಲಿನ ಪುನೀತ್ ರಾಜಕುಮಾರ್ ಸಂಸ್ಕೃತಿ ಮತ್ತು ಸಾಹಿತ್ಯ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭವು ಬೆಂಗಳೂರಿನ ಕನ್ನಡ ಭವನದ ನಯನ ಸಭಾಂಗಣದಲ್ಲಿ ದಿನಾಂಕ:25: 05: 2024 ರ ಶನಿವಾರ ಬೆಳಗ್ಗೆ 11=00 ಗಂಟೆಗೆ ನಡೆಯಲಿದೆ. ಖ್ಯಾತ ಶಿಕ್ಷಣ ತಜ್ಞರೂ, ಚಿಂತಕರಾದ ಡಾ.ಗೀತಾ ರಾಮಾನುಜಂ ಅವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹಿರಿಯ ಜಾನಪದ ಕಲಾವಿದರಾದ ಅರವತ್ತರ ಸಂವತ್ಸರದ ಕಂಟನಕುಂಟೆ ಅಶ್ವತ್ಥ ನಾರಾಯಣ, ಹಾಗೂ ಸಾಮಾಜಿಕ ಕಾರ್ಯಕರ್ತೆ ಬೆಂಗಳೂರಿನ ಕು.ಪೂಜಾರಂಗನಾಥ್ ಅವರಿಗೆ ಪುನೀತ್ ರಾಜಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿಯನ್ನು, ಯುವ ಸಾಹಿತಿಗಳಾದ ಚಿತ್ರದುರ್ಗ



ಜಿಲ್ಲೆಯ ಡಿ.ಓ.ಸದಾಶಿವ ಸಂಕಲ್ಪ ಮತ್ತು ಹಾವೇರಿ ಜಿಲ್ಲೆಯ ಕು. ಮಧು ಕಾರಗಿ ಅವರಿಗೆ ಪುನೀತ್ ರಾಜಕುಮಾರ್ ಸಾಹಿತ್ಯ ದತ್ತಿ ಪ್ರಶಸ್ತಿಯನ್ನು ಪ್ರದಾನ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಜಂಟಿ
ನಿಬಂಧಕರು ಹಾಗೂ ಕಾರ್ಯದರ್ಶಿಗಳಾದ ಶ್ರೀ ಲಕ್ಷ್ಮೀಪತಯ್ಯನವರು, ಹಳ್ಳಿ ಜನಪದ ತಂಡದ ಸ್ಥಾಪಕರಾದ ಗಾಯಕ ಶ್ರೀ ಹೊಸಹಳ್ಳಿ ವಾಸುದೇವ್ ಅವರು ಭಾಗವಹಿಸಲಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ದತ್ತಿ ದಾನಿಗಳು ಹಾಗೂ ಸಾಹಿತಿಗಳಾದ ಶ್ರೀ ಶಶಿಕಾಂತ್ ರಾವ್ ಅವರು ವಹಿಸಲಿದ್ದಾರೆ. ಸಮಾರಂಭದಲ್ಲಿ ಬಿಬಿಜಿಎಸ್ ಟ್ರಸ್ಟ್ ನ ಅಧ್ಯಕ್ಷರಾದ ಡಾ.ಎಸ್. ರಾಮಲಿಂಗೇಶ್ವರ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದು , ವೇದಿಕೆಯಲ್ಲಿ ಭರವಸೆ ತಂಡದ ಸುನಿಲ್, ಮಂಜೇಶ್ ಇರಲಿದ್ದಾರೆ. ಇದೇ ಸಂದರ್ಭದಲ್ಲಿವಿಶೇಷ ಕವಿಗೋಷ್ಠಿ ನಡೆಯಲಿದ್ದು ಅಧ್ಯಕ್ಷತೆಯನ್ನು ಕವಯಿತ್ರಿ ಜಯಶ್ರೀ ರಾಜು ವಹಿಸುವರು, ಕವಿಗೋಷ್ಠಿಯಲ್ಲಿ ಕೆ.ಎಂ.ರೇವಣ್ಣ, ಕೃಷ್ಣಹಾನ್ ಬಾಳ್, ಎಂ.ಎಸ್. ಆಶಾಲತಾ, ಅಂಬುಜಾಕ್ಷಿ ಪ್ರಕಾಶ್, ಶಾಂತಿ ವಾಸು,

ಚಿನ್ನುಪ್ರಕಾಶ್ ಶ್ರೀರಾಮನಹಳ್ಳಿ ಮುಂತಾದವರು ಸ್ವರಚಿತ ಕವನ ವಾಚಿಸುವರು, ಹಳ್ಳಿ ಜನಪದ ಕಲಾವಿದರಿಂದ ಸುಗಮ ಸಂಗೀತ ಕಾರ್ಯಕ್ರಮ ನಡೆಯಲಿದೆ ಎಂದು ಟ್ರಸ್ಟ್ ನ ಕಾರ್ಯದರ್ಶಿ ಸಿ.ಹೇಮಾವತಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುವರ್ಣೋತ್ಸವ ಸಂಭ್ರಮದಲ್ಲಿ

# ಬಯಲು ಸೀಮೆ

BAYALU SEEME

E-mail bayaluseeme51510@gmail.com

KANNADA EVENING DAILY
CHANNAPATNA - 562160

ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ರಾಮನಗರ ಜಿಲ್ಲೆಯ ಅತಿ ಹೆಚ್ಚು ಪ್ರಸಾರದ ಸಂಜೆ ದಿನಪತ್ರಿಕೆ

ಸಂಪಾದಕರು : ಸು.ತ. ರಾಮೇಗೌಡ.
Editor : S.T. Ramegowda

Mob : 9242263904
9380869996

Volume-50 | NO.L/KA/BG/CNA/ 69/2024-2026 R. No. 29653/76 | 16 Tuesday, April-2024 | Rs. 2-00 | Page : 4 | Issue: 90

Free Training
On software Devlopment
(B.E, BCA, MCA, BSC (CS)
Direct Job After Training
whtasapp: 8073888400




ಭರವಸೆ ಎನ್ ಜಿ ಒ 2024 ನೇ ಸಾಲಿನ "ಐ ಎ ಎ ಒಲಿವ ಕ್ರೌನ್ ಪ್ರಶಸ್ತಿ" ಯನ್ನು ತನ್ನ ಮುಡಿಗೇರಿಸಿಕೊಂಡಿದೆ. ಇಂಟರ್ ನ್ಯಾಷನಲ್ ಅಡ್ವರ್ಟೈಸಿಂಗ್ ಅಸೋಸಿಯೇಶನ್ ಹಾಗೂ ಏಶ್ಯನ್ ಫೆಡರೇಶನ್ ಆಫ್ ಅಡ್ವರ್ಟೈಸಿಂಗ್ ಅಸೋಸಿಯೇಶನ್ ವತಿಯಿಂದ ನಡೆದ ಕಾರ್ಯಕ್ರಮ ಇದಾಗಿದ್ದು, ತಂಡವು ತನ್ನ ಭರವಸೆಯ ಹಸಿರು ಎಂಬ ಕಾರ್ಯಕ್ರಮದ ಅಡಿಯಲ್ಲಿ ರೂಪಿಸಿದ್ದ ಹಲವು ವಿನೂತನ ಸಾಮಾಜಿಕ ಪ್ರಯತ್ನಗಳಿಗೆ **"New Age Green Initiatives"**ನ ಅಡಿಯಲ್ಲಿ ಪ್ರಶಸ್ತಿ ಸಂದಿದೆ. ಮುಂಬೈನ

ಐ ಟಿ ಸಿ ಗ್ರಾಂಡ್ ನಲ್ಲಿ ಕಾರ್ಯಕ್ರಮ ನಡೆದಿದ್ದು, ಭರವಸೆ ತಂಡದ ಅಧ್ಯಕ್ಷರಾದ ಸುನೀಲ್ ಗೌಡ, ಮಂಜೇಶ್, ಮನೀಶ್, ಸಂಜಯ್, ಪೂಜಾ, ಅಕ್ಷತಾ ಕಾರ್ಯಕ್ರಮದಲ್ಲಿ ತಂಡದ ಪ್ರತಿನಿಧಿಗಳಾಗಿ ಭಾಗವಹಿಸಿ ಪ್ರಶಸ್ತಿ ಸ್ವೀಕರಿಸಿದರು.

# ಕರುನಾಡ ಕಣ್ವ

ಸಂಪಾದಕರು: ಶಿವಶಂಕರ್
Editor : SHIVASHANKAR
ಮೊಬೈಲ್: 9964850465

**KARUNADA KANVA**

E-mail: karunadakanva@gmail.com

KA/BG/CNA/138/2023-2025

ಕನ್ನಡ ದಿನಪತ್ರಿಕೆ
Kannada Daily





ಭರವಸೆ ಎನ್ ಜಿ ಒ 2024 ನೇ ಸಾಲಿನ ಐ ಎ ಎ ಒಲಿವ ಕ್ರೌನ್ ಪ್ರಶಸ್ತಿ ಯನ್ನು, ತನ್ನ ಮುಡಿಗೇರಿಸಿಕೊಂಡಿದೆ. ಇಂಟರ್ ನ್ಯಾಷನಲ್ ಅಡ್ವರ್ಟೈಸಿಂಗ್ ಅಸೋಸಿಯೇಶನ್ ಹಾಗೂ ಏಶ್ಯನ್ ಫೆಡರೇಶನ್ ಆಫ್ ಅಡ್ವರ್ಟೈಸಿಂಗ್ ಅಸೋಸಿಯೇಶನ್ ವತಿ ಇಂದ ನೆಡೆದ ಕಾರ್ಯಕ್ರಮ ಇದಾಗಿದ್ದು, ತಂಡವು ತನ್ನ ಭರವಸೆಯ ಹಸಿರು ಎಂಬ ಕಾರ್ಯಕ್ರಮದ ಅಡಿಯಲ್ಲಿ ರೂಪಿಸಿದ್ದ ಹಲವು ವಿನೂತನ ಸಾಮಾಜಿಕ ಪ್ರಯತ್ನಗಳಿಗೆ ? **New Age Green Initiatives?** ನ ಅಡಿಯಲ್ಲಿ ಪ್ರಶಸ್ತಿ ಸಂದಿದೆ. ಮುಂಬೈನ ಐ ಟಿ ಸಿ ಗ್ರಾಂಡ್ ನಲ್ಲಿ ಕಾರ್ಯಕ್ರಮ ನಡೆದಿದ್ದು, ಭರವಸೆ ತಂಡದ ಅಧ್ಯಕ್ಷರಾದ ಸುನೀಲ್ ಗೌಡ, ಮಂಜೇಶ್, ಮನೀಶ್, ಸಂಜಯ್, ಪೂಜಾ, ಅಕ್ಷತಾ ಕಾರ್ಯಕ್ರಮದಲ್ಲಿ ತಂಡದ ಪ್ರತಿನಿಧಿಗಳಾಗಿ ಭಾಗವಹಿಸಿ ಪ್ರಶಸ್ತಿ ಸ್ವೀಕರಿಸಿದರು.

ಸುವರ್ಣೋತ್ಸವ ಸಂಭ್ರಮದಲ್ಲಿ
ಬಯಲು ಸೀಮೆ
BAYALU SEEME
KANNADA EVENING DAILY
CHANNAPATNA - 562160
Editor : S.T. Ramegowda
Mob : 9242263904
9380869996
Volume-50 NO.I.KA/BG/CNA/69/2024-2026 R. No. 29653/76 03 Saturday, February-2024 Rs. 2.00 Page : 4 Issue: 30

Free Training
On software Devlopment
(B.E, BCA, MCA, BSC (CS)
Direct Job After Training
whatsapp: 8073888400

# ಡಾ. ಕೃಷ್ಣ ಹಾನ್‌ಬಾಳ್ ಅವರ ಎರಡು ಕೃತಿ ಲೋಕಾರ್ಪಣೆ



ಬೆಂಗಳೂರು, ಫೆ. 03: ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಸಂಘಸಂಸ್ಥೆಗಳ ಪಾತ್ರ ಹೆಚ್ಚು ಮಹತ್ವ ಪಡೆಯಲಿದ್ದು, ಪ್ರಾಮಾಣಿಕವಾಗಿ ತೊಡಗಿಸಿಕೊಂಡು ಸೇವೆ ಸಲ್ಲಿಸಿದಲ್ಲಿ ಆ ಸಂಸ್ಥೆ ಮತ್ತು ಅದರ ಸೇವಕರನ್ನು ಸಮಾಜ, ಸರ್ಕಾರ ಗುರ್ತಿಸುತ್ತದೆ, ಗೌರವಿಸುತ್ತದೆ ಎಂದು ಗಾಂಧಿ ಭವನದ ಅಧ್ಯಕ್ಷರಾದ ನಾಡೋಜ ಡಾ.ವೂಡೇ ಪಿ. ಕೃಷ್ಣ ಅಭಿಪ್ರಾಯ ಪಟ್ಟರು. ಅವರು ಬೆಂಗಳೂರಿನ ಭರವಸೆ ತಂಡವು ಶೇಷಾದ್ರಿಪುರಂನ ಸನ್ಮಾನ್ ಹೋಟೆಲ್ ಸಭಾಂಗಣದಲ್ಲಿ ಏರ್ಪಡಿಸಿದ್ದ ತನ್ನ ನಾಲ್ಕನೇ ವರ್ಷದ ವಾರ್ಷಿಕೋತ್ಸವ ಸಮಾರಂಭ ಹಾಗೂ ಕವಿ, ಉದ್ಯಮಿ ಡಾ.ಕೃಷ್ಣ ಹಾನ್ ಬಾಳ್ ಅವರ "ಮರಳಿ ಊರಿಗೆ" ಕಥಾ ಸಂಕಲನ ಮತ್ತು "ನಾ ಕಂಡದ್ದು ಕಂಡಂತೆ" ಕವನ ಸಂಕಲನ ಸೇರಿದಂತೆ ಎರಡು ಕೃತಿಗಳನ್ನು ಲೋಕಾರ್ಪಣೆ ಮಾಡಿ ಮಾತನಾಡಿದರು.

ಇಂದು ಸಾಹಿತ್ಯ, ಸಂಸ್ಕೃತಿ ಸಂಘಟನೆ, ಹೋರಾಟ, ಪರರಿಗಾಗಿ ಮಿಡಿವ ಸೇವಾ ಮನೋಭಾವ ಕ್ಷೀಣಿಸುತ್ತಿದೆ. ಇಂತಹ ಸಂದರ್ಭದಲ್ಲಿ ಭರವಸೆ ತಂಡದ ಯುವಕರು ತಮ್ಮ ನಿಸ್ವಾರ್ಥ ಸೇವೆಯಿಂದ ಜನಮುಖಿ, ಸಮಾಜಮುಖಿ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿರುವುದು ನಿಜಕ್ಕೂ ಶ್ಲಾಘನೀಯ ಕಾರ್ಯ ಎಂದು ಸಂತೋಷ ವ್ಯಕ್ತಪಡಿಸಿದರು. ಯುವ ಕವಿ, ಉದ್ಯಮಿ ಡಾ.ಕೃಷ್ಣ ಹಾನ್ ಬಾಳ್ ಅವರ ಎರಡು ಕೃತಿಗಳನ್ನು ಕುರಿತು ಮಾತನಾಡಿದ ವಿಜಯಾ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಡಾ.ಆರ್.ವಾದಿರಾಜು ಅವರು ಪ್ರೀತಿ, ಪ್ರೇಮ, ಪ್ರಣಯ ಮತ್ತು ಮಾನವೀಯ ಮೌಲ್ಯಗಳನ್ನು ಬಿತ್ತರಿಸುವ ಕವಿತೆ ಮತ್ತು ಕಥೆಗಳು ಜೀವನಾನುಭವದ ಅಂತಃಸತ್ವವನ್ನು ತೆರೆದಿಡುತ್ತವೆ, ಸಾಹಿತ್ಯ ನಿಂತ ನೀರಾಗಿದೆ ಸದಾ ಚಲನಶೀಲತೆಯಿಂದ ಕೂಡಿರಬೇಕಿದೆ. ಆ ನಿಟ್ಟಿನಲ್ಲಿ ಹಾನ್ ಬಾಳ್ ಅವರ ಕಥೆ, ಕವಿತೆಗಳಲ್ಲಿ ಹಾಸನ ಜಿಲ್ಲೆಯ ಸಾಂಸ್ಕೃತಿಕ, ಸಾಮಾಜಿಕ ಚಿತ್ರಣವನ್ನು ಕಾಣಬಹುದಾಗಿದೆ ಎಂದು ಶುಭ ಹಾರೈಸಿದರು. 3ನೇ ಪುಟಕ್ಕೆ...

2ನೇ ಪುಟದಿಂದ...ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸಾಂಸ್ಕೃತಿಕ ಚಿಂತಕ ಡಾ.ಎಸ್.ರಾಮಲಿಂಗೇಶ್ವರ (ಸಿಸಿರಾ) ಯುವ ಸಮುದಾಯವು ವಿವಿಧ ಆಸೆ, ಆಮಿಷ, ಕೆಟ್ಟ ಚಟಗಳಿಗೆ ಬಲಿಯಾಗಿ ದಿಕ್ಕು ತಪ್ಪಿ, ಜೀವನದಲ್ಲಿ ದಾರಿಯನ್ನು ಉಜ್ವಲಗೊಳಿಸಿಕೊಳ್ಳುವ, ಭವಿಷ್ಯ ರೂಪಿಸಿಕೊಂಡು ಸಮಾಜದಲ್ಲಿ ಸನ್ಮಾರ್ಗ ತೋರುವುದು ಅನಿವಾರ್ಯವಾಗಿದೆ, ಹೀಗಾಗಿ ಭರವಸೆ ತಂಡದ ಸುನಿಲ್ ಗೌಡ ಮತ್ತು ಮಂಜೇಶ್ ಕುಮಾರ್ ಅವರು ಸೇರಿದಂತೆ ನಾಲ್ಕು ವರ್ಷಗಳಿಂದ ಸಮಾಜಕ್ಕೆ ನಿಜವಾದ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಅವರನ್ನು ಅಭಿನಂದಿಸಿದರು.

ಕವಿ ಕೃಷ್ಣ ಹಾನ್ ಬಾಳ್ ಅವರು ತಮ್ಮ ಸಾಹಿತ್ಯಕ್ಕೆ ಪ್ರೋತ್ಸಾಹ, ಪ್ರೇರಣೆ ನೀಡಿದ ತಾಯಿ, ತಂದೆ, ಗುರು, ಸ್ನೇಹಿತರು ಹಾಗೂ ಸಕಲೇಶ್ವರದ ಸುತ್ತ ಮುತ್ತಲಿನ ಪರಿಸರವನ್ನು ನೆನಪಿಸಿಕೊಂಡು ಕೃತಜ್ಞತೆ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ನಾಲ್ಕನೇ ವಾರ್ಷಿಕೋತ್ಸವದ ಅಂಗವಾಗಿ ಡಾ.ವೂಡೇ ಪಿ ಕೃಷ್ಣ (ಸಮಾಜಸೇವೆ), ಡಾ.ಸಿಸಿರಾ (ಸಾಂಸ್ಕೃತಿಕ ಸೇವೆ), ಎಸ್.ಸಹನಾ (ಶೈಕ್ಷಣಿಕ ಸೇವೆ), ಕೃಷ್ಣ ಹಾನ್ ಬಾಳ್ (ಸಾಹಿತ್ಯ ಸೇವೆ), ಮಂಜೇಶ್ ಕುಮಾರ್ (ದೀನದಲಿತರ ಸೇವೆ) ಗಾಗಿ ವಾರ್ಷಿಕ ಪ್ರಶಸ್ತಿಯನ್ನು ರಾಜಾಜಿನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಮೇಜರ್ ಡಾ.ವನಜಾಕ್ಷಿ ಹಳ್ಳಿಯವರ್ ಪ್ರದಾನ ಮಾಡಿದರು.

ಕಾರ್ಯಕ್ರಮದಲ್ಲಿ ಪೂಜಾ, ಜ್ಯೋತಿ , ಸಾಹಿತಿ ಡಾ.ಬೈರಮಂಗಲ ರಾಮೇಗೌಡರು, ಸನ್ಮಾನ್ ಹೋಟೆಲ್ ಮಾಲೀಕರಾದ ಬಿ.ಆರ್. ರಾಮಕೃಷ್ಣ ಭಟ್ , ಹಿರಿಯ ಪತ್ರಕರ್ತ ಡಾ.ಉದಯರವಿ, ಗಾಯಕಿ ಅಂಬುಜಾಕ್ಷಿ ಬೀರೇಶ್ ಮುಂತಾದವರಿದ್ದರು.

RNI. Reg. No: KARKAN/2021/81716 No: MAG/CR/DEL/07/2020-21

# ಕರುನಾಡ ಕಣ್ವ

KARUNADA KANVA

ಸಂಪಾದಕರು: ಶಿವಶಂಕರ್
Editor : SHIVASHANKAR
ಮೊಬೈಲ್: 9964850465
E-mail: karunadakanva@gmail.com
ಕನ್ನಡ ದಿನಪತ್ರಿಕೆ
Kannada Daily
KA/BG/CNA/138/2023-2025

Volume: 04 | Issue: - 03 | RNI No. KARKAN 2021/ 81716 | Ramanagara | Date: 03-02-2024 Saturday | Page -4 | Price: Rs. 2.00

## ಸಮಾಜ ಸೇವೆಯಲ್ಲಿ ಸಂಘ–ಸಂಸ್ಥೆಗಳ ಪಾತ್ರ ಮಹತ್ವದ್ದು : ಶಿಕ್ಷಣ ತಜ್ಞ ಡಾ.ವೂಡೇ ಪಿ. ಕೃಷ್ಣ



ಬೆಂಗಳೂರು: ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಸಂಘಸಂಸ್ಥೆ ಗಳ ಪಾತ್ರ ಹೆಚ್ಚು ಮಹತ್ವ ಪಡೆಯಲಿದ್ದು ಪ್ರಾಮಾಣಿಕ ವಾಗಿ ತೊಡಗಿಸಿಕೊಂಡು ಸೇವೆ ಸಲ್ಲಿಸಿದಲ್ಲಿ ಆ ಸಂಸ್ಥೆ ಮತ್ತು ಅದರ ಸೇವಕರನ್ನು ಸಮಾಜ, ಸರ್ಕಾರ ಗುರ್ತಿಸುತ್ತದೆ, ಗೌರವಿಸುತ್ತದೆ ಎಂದು ಗಾಂಧಿ ಭವನದ ಅಧ್ಯಕ್ಷರಾದ ನಾಡೋಜ ಡಾ. ವೂಡೇ ಪಿ. ಕೃಷ್ಣ ಅಭಿಪ್ರಾಯ ಪಟ್ಟರು.

ಅವರು ಬೆಂಗಳೂರಿನ ಭರವಸೆ ತಂಡವು ಶೇಷಾದ್ರಿಪುರಂನ ಸನ್ಮಾನ್ ಹೋಟೆಲ್ ಸಭಾಂಗಣ ದಲ್ಲಿ ಏರ್ಪಡಿಸಿದ್ದ ತನ್ನ ನಾಲ್ಕನೇ ವರ್ಷದ ವಾರ್ಷಿಕೋತ್ಸವ ಸಮಾರಂಭ ಹಾಗೂ ಕವಿ, ಉದ್ಯಮಿ ಡಾ.ಕೃಷ್ಣ ಹಾನ್ ಬಾಳ್ ಅವರ " ಮರಳಿ ಊರಿಗೆ" ಕಥಾ ಸಂಕಲನ ಮತ್ತು "ನಾ ಕಂಡದ್ದು ಕಂಡಂತೆ" ಕವನ ಸಂಕಲನ ಎಂಬ ಎರಡು ಕೃತಿ ಗಳನ್ನು ಲೋಕಾರ್ಪಣೆ ಮಾಡಿ ಮಾತನಾಡಿದರು.

ಇಂದು ಸಾಹಿತ್ಯ, ಸಂಸ್ಕೃತಿ ಸಂಘಟನೆ, ಹೋರಾಟ, ಪರರಿಗಾಗಿ ದುಡಿವ ಸೇವಾ ಮನೋ ಭಾವ ಕ್ಷೀಣಿಸುತ್ತಿದೆ. ಇಂತಹ ಸಂದರ್ಭದಲ್ಲಿ ಭರವಸೆ ತಂಡದ ಯುವಕರು ತಮ್ಮ ನಿಸ್ವಾರ್ಥ ಸೇವೆಯಿಂದ ಜನಮುಖಿ, ಸಮಾಜಮುಖಿ ಕಾರ್ಯಕ್ರಮಗಳಲ್ಲಿ ತೊಡಗಿಸಿ ಕೊಂಡಿರುವುದು ನಿಜಕ್ಕೂ ಶ್ಲಾಘನೀಯ ಕಾರ್ಯ ಎಂದು ಡಾ.ಕೃಷ್ಣ ಅವರು ಸಂತೋಷ ವ್ಯಕ್ತಪಡಿಸಿದರು.

ಯುವ ಕವಿ, ಉದ್ಯಮಿ ಡಾ.ಕೃಷ್ಣ ಹಾನ್ ಬಾಳ್ ಅವರ ಎರಡು ಕೃತಿಗಳನ್ನು ಕುರಿತು ಮಾತನಾಡಿದ ವಿಜಯಾ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಡಾ.ಆರ್.ವಾದಿರಾಜು ಅವರು ಪ್ರೀತಿ, ಪ್ರೇಮ, ಪ್ರಣಯ ಮತ್ತು ಮಾನವೀಯ ಮೌಲ್ಯಗಳನ್ನು ಬಿತ್ತರಿಸುವ ಕವಿತೆ ಮತ್ತು ಕಥೆಗಳು ಜೀವನಾನುಭವದ ಅಂತಃಸತ್ವವನ್ನು ತೆರೆದಿಡುತ್ತವೆ, ಸಾಹಿತ್ಯ ನಿಂತ ನೀರಾಗಿದೆ ಸದಾ ಚಲನಶೀಲತೆ ಯಿಂದ ಕೂಡಿರಬೇಕಿದೆ. ಆ ನಿಟ್ಟಿನಲ್ಲಿ ಹಾನ್ ಬಾಳ್ ಅವರ ಕಥೆ, ಕವಿತೆಗಳು ಹಾಸನ ಜಿಲ್ಲೆಯ ಸಾಂಸ್ಕೃತಿಕ, ಸಾಮಾಜಿಕ ಚಿತ್ರಣವನ್ನು ಕಾಣಬಹುದಾ ಗಿದೆ ಎಂದು ಶುಭ ಹಾರೈಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸಾಂಸ್ಕೃತಿಕ ಚಿಂತಕ ಡಾ.ಎಸ್.ರಾಮಲಿಂಗೇಶ್ವರ (ಸಿಸಿರಾ) ಯುವ ಸಮುದಾಯವು ವಿವಿಧ ಆಸೆ, ಆಮಿಷ, ಕೆಟ್ಟ ಚಟಗಳಿಗೆ ಬಲಿಯಾಗಿ ದಿಕ್ಕು ತಪ್ಪಿ, ಜೀವನ ದಾರಿಯನ್ನು ಉಜ್ವಲಗೊಳಿಸಿಕೊಳ್ಳುವ ,ಭವಿಷ್ಯ ರೂಪಿಸಿಕೊಂಡು ಸಮಾಜದಲ್ಲಿ ಸನ್ಮಾರ್ಗ ತೋರುವುದು ಅನಿವಾರ್ಯವಾಗಿದೆ, ಹೀಗಾಗಿ ಭರವಸೆ ತಂಡದ ಸುನಿಲ್ ಗೌಡ ಮತ್ತು ಮಂಜೇಶ್ ಕುಮಾರ್ ಅವರು ಸೇರಿದಂತೆ ನಾಲ್ಕು ವರ್ಷಗಳಿಂದ ಸಮಾಜಕ್ಕೆ ನಿಜವಾದ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಅವರನ್ನು ಅಭಿನಂದಿಸಿದರು.

ಕವಿ ಕೃಷ್ಣ ಹಾನ್ ಬಾಳ್ ಅವರು ತಮ್ಮ ಸಾಹಿತ್ಯಕ್ಕೆ ಪ್ರೋತ್ಸಾಹ, ಪ್ರೇರಣೆ ನೀಡಿದ ತಾಯಿ, ತಂದೆ, ಗುರು, ಸ್ನೇಹಿತರು ಹಾಗೂ ಸಕಲೇಶ್ವರದ ಸುತ್ತ ಮುತ್ತಲಿನ ಪರಿಸರವನ್ನು ನೆನಪಿಸಿಕೊಂಡು ಕೃತಜ್ಞತೆ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ನಾಲ್ಕನೇ ವಾರ್ಷಿಕೋತ್ಸ ವದ ಅಂಗವಾಗಿ ಡಾ.ವೂಡೇ ಪಿ ಕೃಷ್ಣ (ಸಮಾಜಸೇವೆ), ಡಾ.ಸಿಸಿರಾ (ಸಾಂಸ್ಕೃತಿಕ ಸೇವೆ), ಎಸ್.ಸಹನಾ (ಶೈಕ್ಷಣಿಕ ಸೇವೆ), ಕೃಷ್ಣ ಹಾನ್‌ಬಾಳ್ (ಸಾಹಿತ್ಯ ಸೇವೆ), ಮಂಜೇಶ್ ಕುಮಾರ್ (ದೀನದಲಿತರ ಸೇವೆ) ಗಾಗಿ ವಾರ್ಷಿಕ ಪ್ರಶಸ್ತಿಯನ್ನು ರಾಜಾಜಿನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಮೇಜರ್ ಡಾ.ವನಜಾಕ್ಷಿ ಹಳ್ಳಿಯವರ್ ಪ್ರದಾನ ಮಾಡಿದರು.

ಕಾರ್ಯಕ್ರಮದಲ್ಲಿ ಪೂಜಾ, ಜ್ಯೋತಿ , ಸಾಹಿತಿ ಡಾ.ಬೈರಮಂಗಲ ರಾಮೆಗೌಡರು, ಸನ್ಮಾನ್ ಹೋಟೆಲ್ ಮಾಲೀಕರಾದ ಬಿ.ಆರ್. ರಾಮಕೃಷ್ಣ ಭಟ್, ಹಿರಿಯ ಪತ್ರಕರ್ತ ಡಾ.ಉದಯರವಿ, ಗಾಯಕಿ ಅಂಬುಜಾಕ್ಷಿ ಭೀರೇಶ್ ಮುಂತಾದವರಿದ್ದರು.

ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತ
SAMYUKTA KARNATAKA
ಸಂಯುಕ್ತ ಕರ್ನಾಟಕ
ಕನ್ನಡಿಗರ ಸಾಕ್ಷಿಪ್ರಜ್ಞೆ
ಶತಕದತ್ತ ಓಟ... ತೊಂಬತ್ತರ ನೋಟ

# ಸಮಾಜ ಸ್ವಾಸ್ಥ್ಯ ಕಾಪಾಡುವಲ್ಲಿ ಸಂಘಗಳ ಪಾತ್ರ ಅನನ್ಯ


**ಬೆಂಗಳೂರು:** ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಸಂಘಸಂಸ್ಥೆಗಳ ಪಾತ್ರ ಮಹತ್ವವಾಗಿದೆ. ಪ್ರಾಮಾಣಿಕವಾಗಿ ತೊಡಗಿಸಿಕೊಂಡು ಸೇವೆ ಸಲ್ಲಿಸಿದಲ್ಲಿ ಆ ಸಂಸ್ಥೆ ಮತ್ತು ಅದರ ಸೇವಕರನ್ನು ಸಮಾಜ ಹಾಗೂ ಸರ್ಕಾರ ಗುರುತಿಸಿ ಗೌರವಿಸುತ್ತದೆ ಎಂದು ಗಾಂಧಿ ಭವನದ ಅಧ್ಯಕ್ಷ ನಾಡೋಜ ಡಾ.ವೂಡೇ ಪಿ. ಕೃಷ್ಣ ಅಭಿಪ್ರಾಯಪಟ್ಟರು.

ಭರವಸೆ ತಂಡ ಶೇಷಾದ್ರಿಪುರಂನ ಸನ್ಮಾನ್ ಹೋಟೆಲ್ ಸಭಾಂಗಣದಲ್ಲಿ ಏರ್ಪಡಿಸಿದ್ದ 4ನೇ ವರ್ಷದ ವಾರ್ಷಿಕೋತ್ಸವ ಸಮಾರಂಭ ಹಾಗೂ ಕವಿ, ಉದ್ಯಮಿ ಡಾ.ಕೃಷ್ಣ ಹಾನ್ ಬಾಳ್ ಅವರ ಮರಳಿ ಊರಿಗೆ" ಕಥಾ ಸಂಕಲನ ಮತ್ತು ನಾ ಕಂಡದ್ದು ಕಂಡಂತೆ ಕವನ ಸಂಕಲನ ಲೋಕಾರ್ಪಣೆ ಮಾಡಿ ಮಾತನಾಡಿದರು.

ಇಂದು ಸಾಹಿತ್ಯ, ಸಂಸ್ಕೃತಿ ಸಂಘಟನೆ, ಹೋರಾಟ, ಪರರಿಗಾಗಿ ದುಡಿವ ಸೇವಾ ಮನೋಭಾವ ಕ್ಷೀಣಿಸುತ್ತಿದೆ. ಇಂತಹ ಸಂದರ್ಭದಲ್ಲಿ ಭರವಸೆ ತಂಡದ ಯುವಕರು ತಮ್ಮ ನಿಸ್ವಾರ್ಥ ಸೇವೆಯಿಂದ ಜನಮುಖಿ, ಸಮಾಜಮುಖಿ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿರುವುದು ಶ್ಲಾಘನೀಯ ಎಂದರು. ವಿಜಯಾ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ.ಆರ್. ವಾದಿರಾಜು ಮಾತನಾಡಿ, ಡಾ.ಕೃಷ್ಣ ಹಾನ್‌ಬಾಳ್ ಅವರ ಕೃತಿಗಳು ಪ್ರೀತಿ, ಪ್ರೇಮ, ಪ್ರಣಯ ಮತ್ತು ಮಾನವೀಯ ಮೌಲ್ಯಗಳನ್ನು ಬಿತ್ತರಿಸುವ ಕವಿತೆ ಮತ್ತು ಕಥೆಗಳು ಜೀವನಾನುಭವದ ಅಂತಃಸತ್ವವನ್ನು ತೆರೆದಿಡುತ್ತವೆ. ಸಾಹಿತ್ಯ ನಿಂತ ನೀರಾಗಿದೆ ಸದಾ ಚಲನಶೀಲತೆಯಿಂದ ಕೂಡಿರಬೇಕಿದೆ. ಆ ನಿಟ್ಟಿನಲ್ಲಿ ಹಾನ್ ಬಾಳ್ ಅವರ ಕಥೆ, ಕವಿತೆಗಳು ಹಾಸನ ಜಿಲ್ಲೆಯ ಸಾಂಸ್ಕೃತಿಕ, ಸಾಮಾಜಿಕ ಚಿತ್ರಣ ಕಾಣಬಹುದಾಗಿದೆ ಎಂದರು.

ಸಾಂಸ್ಕೃತಿಕ ಚಿಂತಕ ಡಾ.ಎಸ್.ರಾಮಲಿಂಗೇಶ್ವರ (ಸಿಸಿರಾ) ಮಾತನಾಡಿ ಯುವ ಸಮುದಾಯವು ವಿವಿಧ ಆಸೆ, ಆಮಿಷ, ಕೆಟ್ಟ ಚಟಗಳಿಗೆ ಬಲಿಯಾಗಿ ದಿಕ್ಕು ತಪ್ಪಿ, ಜೀವನ ದಾರಿಯನ್ನು ಉಜ್ವಲಗೊಳಿಸಿಕೊಳ್ಳುವ ಭವಿಷ್ಯ ರೂಪಿಸಿಕೊಂಡು ಸಮಾಜದಲ್ಲಿ ಸನ್ಮಾರ್ಗ ತೋರುವುದು ಅನಿವಾರ್ಯವಾಗಿದೆ ಎಂದರು. ಡಾ.ವೂಡೇ ಪಿ ಕೃಷ್ಣ (ಸಮಾಜಸೇವೆ), ಡಾ.ಸಿಸಿರಾ (ಸಾಂಸ್ಕೃತಿಕ ಸೇವೆ), ಎಸ್.ಸಹನಾ (ಶೈಕ್ಷಣಿಕ ಸೇವೆ), ಕೃಷ್ಣ ಹಾನ್ ಬಾಳ್ (ಸಾಹಿತ್ಯ ಸೇವೆ), ಮಂಜೇಶ್ ಕುಮಾರ್ ( ದೀನದಲಿತರ ಸೇವೆ) ಗಾಗಿ ವಾರ್ಷಿಕ ಪ್ರಶಸ್ತಿಯನ್ನು ರಾಜಾಜಿನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಮೇಜರ್ ಡಾ.ವನಜಾಕ್ಷಿ ಹಳ್ಳಿಯವರ್ ಪ್ರದಾನ ಮಾಡಿದರು. ಪೂಜಾ, ಜ್ಯೋತಿ, ಸಾಹಿತಿ ಡಾ.ಬೈರಮಂಗಲ ರಾಮೇಗೌಡ, ಸನ್ಮಾನ್ ಹೋಟೆಲ್ ಮಾಲೀಕ ಬಿ.ಆರ್. ರಾಮಕೃಷ್ಣ ಭಟ್, ಹಿರಿಯ ಪತ್ರಕರ್ತ ಡಾ.ಉದಯರವಿ, ಗಾಯಕಿ ಅಂಬುಜಾಕ್ಷಿ ಭೀರೇಶ್ ಹಾಗೂ ಇತರರು ಇದ್ದರು.


ಭರವಸೆ ತಂಡ ಶೇಷಾದ್ರಿಪುರಂನಲ್ಲಿ ಏರ್ಪಡಿಸಿದ್ದ 4ನೇ ವರ್ಷದ ವಾರ್ಷಿಕೋತ್ಸವ ಸಮಾರಂಭದಲ್ಲಿ ಡಾ.ವೂಡೇ ಪಿ ಕೃಷ್ಣ, ಡಾ.ಸಿಸಿರಾ, ಎಸ್.ಸಹನಾ, ಕೃಷ್ಣ ಹಾನ್ ಬಾಳ್, ಮಂಜೇಶ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು.




ಬೆಂಗಳೂರಿನ ಭರವಸೆ ತಂಡವು ಸನ್ಮಾನ್ಯ ಹೋಟೆಲ್ ಸಭಾಂಗಣದಲ್ಲಿ ಏರ್ಪಡಿಸಿದ್ದ ಉದ್ಯಮಿ, ಯುವ ಸಾಹಿತಿ ಡಾ.ಕೃಷ್ಣ ಹಾನ್ ಬಾಳ್ ಅವರ ಎರಡು ಕೃತಿಗಳನ್ನು, ಶಿಕ್ಷಣ ತಜ್ಞ,ನಾಡೋಜ ಡಾ.ವೂಡೇ ಪಿ ಕೃಷ್ಣ ಅವರು ಲೋಕಾರ್ಪಣೆ ಮಾಡಿದರು. ಚಿತ್ರದಲ್ಲಿ ಸಾಂಸ್ಕೃತಿಕ ಚಿಂತಕ ಡಾ.ಸಿಸಿರಾ, ಸಾಹಿತಿ ಡಾ.ಆರ್.ವಾದಿರಾಜ್, ಸರ್ಕಾರಿ ಕಾಲೇಜಿನ ಪ್ರಾಂಶುಪಾಲರಾದ ಮೇಜರ್ ಡಾ.ವನಜಾಕ್ಷಿ , ಭರವಸೆ ತಂಡದ ಸುನಿಲ್ ಗೌಡ ಇದ್ದಾರೆ.

www.ramanagaram-varthe.blogspot.com

# ರಾಮನಗರ ವಾರ್ತೆ

RAMANAGARAM -VARTHE - DAILY

Editor: Cheluvaraju, B.A — 9483970187/9591289777; 080 29782222/27271197 — @varthemgm

RNI-58076/93, KA/BG/CNA/80/2021-2023 | Volume-32 | Issue-08 | 03.02.2024 Saturday | Page-4 | Price-3.00

ಡಿ.ಎಸ್. ಪದಂ ಜ್ಯುವೆಲರ್ಸ್ & ಬ್ಯಾಂಕರ್

A/C

9448068484 9449071704 080-27272204

# ಸಮಾಜ ಸೇವೆಯಲ್ಲಿ ಸಂಘ–ಸಂಸ್ಥೆಗಳ ಪಾತ್ರ ಮಹತ್ವದ್ದು





ಬೆಂಗಳೂರು: ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಸಂಘಸಂಸ್ಥೆಗಳ ಪಾತ್ರ ಹೆಚ್ಚು ಮಹತ್ವ ಪಡೆಯಲಿದ್ದು ಪ್ರಾಮಾಣಿಕವಾಗಿ ತೊಡಗಿಸಿಕೊಂಡು ಸೇವೆ ಸಲ್ಲಿಸಿದಲ್ಲಿ ಆ ಸಂಸ್ಥೆ ಮತ್ತು ಅದರ ಸೇವಕರನ್ನು ಸಮಾಜ, ಸರ್ಕಾರ ಗುರ್ತಿಸುತ್ತದೆ, ಗೌರವಿಸುತ್ತದೆ ಎಂದು ಗಾಂಧಿ ಭವನದ ಅಧ್ಯಕ್ಷರಾದ ನಾಡೋಜ ಡಾ.ವೂಡೇ ಪಿ. ಕೃಷ್ಣ ಅಭಿಪ್ರಾಯಪಟ್ಟರು.

ಅವರು ಬೆಂಗಳೂರಿನ ಭರವಸೆ ತಂಡವು ಶೇಷಾದ್ರಿಪುರಂನ ಸನ್ಮಾನ್ ಹೋಟೆಲ್ ಸಭಾಂಗಣದಲ್ಲಿ ಏರ್ಪಡಿಸಿದ್ದ ತನ್ನ ನಾಲ್ಕನೇ ವರ್ಷದ ವಾರ್ಷಿಕೋತ್ಸವ ಸಮಾರಂಭ ಹಾಗೂ ಕವಿ, ಉದ್ಯಮಿ ಡಾ.ಕೃಷ್ಣ ಹಾನ್ ಬಾಳ್ ಅವರ "ಮರಳಿ ಊರಿಗೆ" ಕಥಾ ಸಂಕಲನ ಮತ್ತು "ನಾ ಕಂಡದ್ದು ಕಂಡಂತೆ" ಕವನ ಸಂಕಲನ ಎಂಬ ಎರಡು ಕೃತಿಗಳನ್ನು ಲೋಕಾರ್ಪಣೆ ಮಾಡಿ ಮಾತನಾಡಿದರು.

ಇಂದು ಸಾಹಿತ್ಯ, ಸಂಸ್ಕೃತಿ ಸಂಘಟನೆ , ಹೋರಾಟ , ಪರರಿಗಾಗಿ ದುಡಿವ ಸೇವಾ ಮನೋಭಾವ ಕ್ಷೀಣಿಸುತ್ತಿದೆ. ಇಂತಹ ಸಂದರ್ಭದಲ್ಲಿ ಭರವಸೆ ತಂಡದ ಯುವಕರು ತಮ್ಮ ನಿಸ್ವಾರ್ಥ ಸೇವೆಯಿಂದ ಜನಮುಖಿ, ಸಮಾಜಮುಖಿ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿರುವುದು ನಿಜಕ್ಕೂ ಶ್ಲಾಘನೀಯ ಕಾರ್ಯ ಎಂದು ಡಾ.ಕೃಷ್ಣ ಅವರು ಸಂತೋಷ ವ್ಯಕ್ತಪಡಿಸಿದರು.

ಯುವ ಕವಿ, ಉದ್ಯಮಿ ಡಾ.ಕೃಷ್ಣ ಹಾನ್ ಬಾಳ್ ಅವರ ಎರಡು ಕೃತಿಗಳನ್ನು ಕುರಿತು ಮಾತನಾಡಿದ ವಿಜಯಾ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಡಾ.ಆರ್.ವಾದಿರಾಜು ಅವರು ಪ್ರೀತಿ, ಪ್ರೇಮ, ಪ್ರಣಯ ಮತ್ತು ಮಾನವೀಯ ಮೌಲ್ಯಗಳನ್ನು ಬಿತ್ತರಿಸುವ ಕವಿತೆ ಮತ್ತು ಕಥೆಗಳು ಜೀವನಾನುಭವದ ಅಂತಃಸತ್ವವನ್ನು ತೆರೆದಿಡುತ್ತವೆ, ಸಾಹಿತ್ಯ ನಿಂತ ನೀರಾಗಿದೆ ಸದಾ ಚಲನಶೀಲತೆಯಿಂದ ಕೂಡಿರಬೇಕಿದೆ. ಆ ನಿಟ್ಟಿನಲ್ಲಿ ಹಾನ್ ಬಾಳ್ ಅವರ ಕಥೆ, ಕವಿತೆಗಳು ಹಾಸನ ಜಿಲ್ಲೆಯ ಸಾಂಸ್ಕೃತಿಕ, ಸಾಮಾಜಿಕ ಚಿತ್ರಣವನ್ನು ಕಾಣಬಹುದಾಗಿದೆ ಎಂದು ಶುಭ ಹಾರೈಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸಾಂಸ್ಕೃತಿಕ ಚಿಂತಕ ಡಾ.ಎಸ್. ರಾಮಲಿಂಗೇಶ್ವರ(ಸಿಸಿರಾ) ಯುವ ಸಮುದಾಯವು ವಿವಿಧ ಆಸೆ, ಆಮಿಷ, ಕೆಟ್ಟ ಚಟಗಳಿಗೆ ಬಲಿಯಾಗಿ ದಿಕ್ಕು ತಪ್ಪಿದ ಜೀವನ ದಾರಿಯನ್ನು ಉಜ್ವಲಗೊಳಿಸಿಕೊಳ್ಳುವ, ಭವಿಷ್ಯ ರೂಪಿಸಿಕೊಂಡು ಸಮಾಜದಲ್ಲಿ ಸನ್ಮಾರ್ಗ ತೋರುವುದು ಅನಿವಾರ್ಯವಾಗಿದೆ, ಹೀಗಾಗಿ ಭರವಸೆ ತಂಡದ ಸುನಿಲ್ ಗೌಡ ಮತ್ತು ಮಂಜೇಶ್ ಕುಮಾರ್ ಅವರು ಸೇರಿದಂತೆ ನಾಲ್ಕು ವರ್ಷಗಳಿಂದ ಸಮಾಜಕ್ಕೆ ನಿಜವಾದ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಅವರನ್ನು ಅಭಿನಂದಿಸಿದರು.

ಕವಿ ಕೃಷ್ಣ ಹಾನ್ ಬಾಳ್ ಅವರು ತಮ್ಮ ಸಾಹಿತ್ಯಕ್ಕೆ ಪ್ರೋತ್ಸಾಹ, ಪ್ರೇರಣೆ ನೀಡಿದ ತಾಯಿ, ತಂದೆ, ಗುರು, ಸ್ನೇಹಿತರು ಹಾಗೂ ಸಕಲೇಶ್ವರದ ಸುತ್ತಮುತ್ತಲಿನ ಪರಿಸರವನ್ನು ನೆನಪಿಸಿಕೊಂಡು ಕೃತಜ್ಞತೆ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ನಾಲ್ಕನೇ ವಾರ್ಷಿಕೋತ್ಸವದ ಅಂಗವಾಗಿ ಡಾ.ವೂಡೇ ಪಿ ಕೃಷ್ಣ(ಸಮಾಜಸೇವೆ), ಡಾ.ಸಿಸಿರಾ(ಸಾಂಸ್ಕೃತಿಕ ಸೇವೆ), ಎಸ್.ಸಹನಾ(ಶೈಕ್ಷಣಿಕ ಸೇವೆ), ಕೃಷ್ಣ ಹಾನ್ ಬಾಳ್ (ಸಾಹಿತ್ಯ ಸೇವೆ), ಮಂಜೇಶ್ ಕುಮಾರ್(ದೀನದಲಿತರ ಸೇವೆ) ಗಾಗಿ ವಾರ್ಷಿಕ ಪ್ರಶಸ್ತಿಯನ್ನು ರಾಜಾಜಿನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಮೇಜರ್ ಡಾ.ವನಜಾಕ್ಷಿ ಹಳ್ಳಿಯವರ್ ಪ್ರದಾನ ಮಾಡಿದರು. ಕಾರ್ಯಕ್ರಮದಲ್ಲಿ ಪೂಜಾ, ಜ್ಯೋತಿ, ಸಾಹಿತಿ ಡಾ.ಬೈರಮಂಗಲ ರಾಮೆಗೌಡರು, ಸನ್ಮಾನ್ ಹೋಟೆಲ್ ಮಾಲೀಕರಾದ ಬಿ.ಆರ್.ರಾಮಕೃಷ್ಣ ಭಟ್, ಹಿರಿಯ ಪತ್ರಕರ್ತ ಡಾ.ಉದಯರವಿ, ಗಾಯಕಿ ಅಂಬುಜಾಕ್ಷಿ ಭೀರೇಶ್ ಮುಂತಾದವರಿದ್ದರು.

ಈ ಸಂಜೆ



ನಗರದ ಶೇಷಾದ್ರಿಪುರಂನಲ್ಲಿ ಭರವಸೆ ಸಂಸ್ಥೆ ಹಮ್ಮಿಕೊಂಡಿದ್ದ ನಾಲ್ಕನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ನಾಡೋಜ ಡಾ.ವೂಡೇ ಪಿ.ಕೃಷ್ಣ , ಡಾ.ಸಿಸಿರಾ, ಪ್ರೊ.ಸಹನಾ.ಎಸ್., ಕೃಷ್ಣ ಹಾನ್ ಬಾಳ್‌ರವರಿಗೆ ವಾರ್ಷಿಕ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಎನ್‌ಸಿಸಿ ಮೇಜರ್ ಡಾ. ವನಜಾಕ್ಷಿ, ಪ್ರಾಧ್ಯಾಪಕ ಡಾ.ಆರ್.ವಾದಿರಾಜ್ , ಭರವಸೆ ತಂಡದ ನಾಯಕ ಸುನಿಲ್ ಗೌಡ ಮುಂತಾದವರಿದ್ದರು.

www.ramanagaram-varthe.blogspot.com

ರಾಮನಗರ ವಾರ್ತೆ

RAMANAGARAM -VARTHE - DAILY

Editor: Cheluvaraju, s.a

RNI-58076/93, KA/BG/CNA/80/2021-2023 Volume-32 Issue-05 31.01.2024 Wednesday Page-4

# ಎರಡು ಕೃತಿಗಳ ಲೋಕಾರ್ಪಣೆ ಮತ್ತು ಪ್ರಶಸ್ತಿ ಪ್ರದಾನ

ಬೆಂಗಳೂರು: ಬೆಂಗಳೂರಿನ ಭರವಸೆ ತಂಡದ ನಾಲ್ಕನೇ ವರ್ಷದ ವಾರ್ಷಿಕೋತ್ಸವ ಸಮಾರಂಭವನ್ನು ದಿನಾಂಕ: 1.2.2024 ರ ಗುರುವಾರ ಸಂಜೆ 4.30 ಗಂಟೆಗೆ ಶೇಷಾದ್ರಿಪುರಂನ ಸನ್ಮಾನ್ ಹೋಟೆಲ್ ಸಭಾಂಗಣದಲ್ಲಿ ಸರಳವಾಗಿ ಆಚರಿಸಲು ತೀರ್ಮಾನಿಸಲಾಗಿದ್ದು ಯುವ ಕವಿ, ಉದ್ಯಮಿ ಡಾ.ಕೃಷ್ಣ ಹಾನ್‌ಬಾಳ್ ಅವರ ಎರಡು ಕೃತಿಗಳ ಲೋಕಾರ್ಪಣೆ ಮತ್ತು ವಿವಿಧ ಕ್ಷೇತ್ರದ ನಾಲ್ಕು ಜನ ಸಾಧಕರುಗಳಿಗೆ ವಾರ್ಷಿಕೋತ್ಸವದ ಸಂದರ್ಭದಲ್ಲಿ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಭರವಸೆ ತಂಡದ ಅಧ್ಯಕ್ಷರಾದ ಸುನಿಲ್‌ಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂದು ಸಂಜೆ ಶಿಕ್ಷಣ ತಜ್ಞರು, ಗಾಂಧಿ ಭವನದ ಅಧ್ಯಕ್ಷರಾದ ನಾಡೋಜ ಡಾ.ವೂಡೇ ಪಿ. ಕೃಷ್ಣ ಅವರು ಪುಸ್ತಕ ಲೋಕಾರ್ಪಣೆ ಮಾಡಲಿದ್ದು, ಗಾಂಧಿ ವಿಚಾರಧಾ- ರೆ, ಸಮಾಜ, ಶೈಕ್ಷಣಿಕ ಕ್ಷೇತ್ರದ ಸಾಧನೆಗೆ ವಾರ್ಷಿಕ ಪ್ರಶಸ್ತಿ ಸ್ವೀಕರಿಸಲಿದ್ದಾರೆ. ಸಂಸ್ಕೃತಿ ಚಿಂತಕ, ಶೇಷಾದ್ರಿಪುರಂ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ.ಎಸ್.ರಾಮಲಿಂಗೇಶ್ವರ(ಸಿಸಿರಾ) ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ರಾಜಾಜಿನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಮೇಜರ್ ಡಾ.ವನಜಾಕ್ಷಿ ಹಳ್ಳಿಯವರ್ ಪ್ರಶಸ್ತಿ ಪ್ರದಾನ ಮಾಡುವರು, ಸಾಹಿತ್ಯ ಸಾಂಸ್ಕೃತಿಕ ಕ್ಷೇತ್ರದ ಸೇವೆಗೆ ಡಾ.ಸಿಸಿರಾ, ಯುವ ಉದ್ಯಮ ಕ್ಷೇತ್ರದ ಡಾ.ಕೃಷ್ಣ ಹಾನ್ ಬಾಳ್, ಸಾಮಾಜಿಕ ಸೇವೆಗೆ ಗಣಕ ವಿಜ್ಞಾನ ಉಪನ್ಯಾಸಕಿ ಎಸ್.ಸಹನಾ ಅವರಿಗೆ ಗೌರವ ಪ್ರಶಸ್ತಿ ಪ್ರದಾನ ನಡೆಯಲಿದೆ. ಕೃಷ್ಣ ಅವರ ಕೃತಿಗಳನ್ನು ಕುರಿತು ವಿಜಯ ಕಾಲೇಜು ಕನ್ನಡ ಪ್ರಾಧ್ಯಾಪಕರು, ಲೇಖಕರಾದ ಡಾ.ಆರ್.ವಾದಿರಾಜು ಮಾತನಾಡುವರು. ಸಮಾರಂಭದಲ್ಲಿ ಸನ್ಮಾನ್ ಹೋಟೆಲ್ ಮಾಲೀಕರಾದ ಬಿ.ಆರ್.ರಾಮಕೃಷ್ಣಭಟ್, ಭರವಸೆ ತಂಡದ ಕಾರ್ಯದರ್ಶಿ ಮಂಜೇಶ್‌ಕುಮಾರ್ ಭಾಗವಹಿಸುವರೆಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕಾರ್ಯಕರ್ತರು ಭಾಗವಹಿಸಿದ್ದರು.

ಆಹಾರ ವಿತರಣೆ: ಭರವಸೆ ತಂಡವು 'ಬಡವರಿಗೆ ಭರವಸೆಯ ಬುತ್ತಿ' ಕಾರ್ಯಕ್ರಮದ ಅಡಿಯಲ್ಲಿ ಉಚಿತವಾಗಿ ಆಹಾರ ಹಂಚಿತು. 'ಜೈ ಶ್ರೀರಾಮ' ಎಂಬ ಹೆಸರಿನ ಊಟದ ಪೊಟ್ಟಣಗಳನ್ನು ರಸ್ತೆ ಬದಿಯಲ್ಲಿರುವ ನಿರ್ಗತಿಕರಿಗೆ, ಲಿಂಗತ್ವ

ಅಲ್ಪಸಂಖ್ಯಾತರಿಗೆ, ಚಮ
ಪೀಡಿತರಿಗೆ ನೀಡಲಾಯಿತು.

ಉದಯವಾಣಿ
ಜನಮನದ ಜೀವನಾಡಿ
www.udayavani.com | Bengaluru ಬೆಂಗಳೂರು | ಗುರುವಾರ, ಡಿಸೆಂಬರ್ 7, 2023 | ಪುಟ 12 | ಬೆಲೆ: ₹ 6.00

# ಶಾಲೆ, ಸ್ಲಂ ಮಕ್ಕಳು, ವೃದ್ಧರಿಗೆ ಭರವಸೆ ಬೆಳಕು

**ಬಡ ಮಕ್ಕಳ ಶಿಕ್ಷಣಕ್ಕೆ ಆರ್ಥಿಕ ನೆರವು, ಶಾಲೆ ಕಟ್ಟಡಕ್ಕೆ ಸುಣ್ಣಬಣ್ಣ**

**ಅನಾಥಾಶ್ರಮದ ಮಕ್ಕಳು, ವೃದ್ಧರು, ಅಶಕ್ತರಿಗೆ ಊಟ ಉಪಚಾರ ಸೇವೆ**

**ಧ್ವನಿ ಇಲ್ಲದವರಿಗೆ ಭರವಸೆ ಬೆಳಕು ಮೂಡಿಸುತ್ತಿರುವ ಭರವಸೆ ಟೀಂ**

• ಭಾರತಿ ಸಜ್ಜನ್

**ಬೆಂಗಳೂರು:** ತಾವಾಯಿತು ತಮ್ಮ ಕೆಲಸ ಆಯಿತು ಎಂದು ಹೊರಗಿಕೊಂಡಿರುವ ಯುವ ಸಮುದಾಯದ ನಡುವೆ, ಒಂದಿಷ್ಟು ಮಂದಿ ಸೇರಿಕೊಂಡು ಭರವಸೆ ಎಂಬ ಟೀಂ ಕಟ್ಟಿಕೊಂಡು ಭರವಸೆ ಬೆಳಕಾಗಿ ಸಮಾಜಮುಖಿಯಾಗಿ ಕಾರ್ಯನಿರ್ವಹಿಸುತ್ತಿದೆ.

-ಬಡ ಮಕ್ಕಳಿಗೆ ವಿದ್ಯಾಭ್ಯಾಸ, ಸರ್ಕಾರಿ ಶಾಲೆಗಳಿಗೆ ಬಣ್ಣ, ಅನಾಥಾಶ್ರಮದ ಮಕ್ಕಳಿಗೆ ಹಾಗೂ ವೃದ್ಧರಿಗೆ ಆರೋಗ್ಯ ಶಿಬಿರ, ಬೀದಿಬದಿ ವ್ಯಾಪಾರಿಗೆ ಹಾಗೂ ಹಸಿದವರಿಗೆ ಊಟ, ಪ್ಲಾಸ್ಟಿಕ್ ಬದಲಿಗೆ ಪೇಪರ್ ಅಥವಾ ಬಟ್ಟೆ ಬ್ಯಾಗ್ ವಿತರಣೆ...

ತಾವೊಬ್ಬರೇ ಬೆಳೆಯುವ ಜತೆಗೆ ಸುತ್ತಲಿನವರನ್ನೂ ಬೆಳೆಸುವ ಆಲೋಚನೆಯಿಂದ 2019ರ ಡಿಸೆಂಬರ್‌ನಲ್ಲಿ ಒಟ್ಟಿಂದ ಹುಟ್ಟಿಕೊಂಡ 'ಭರವಸೆ' ತಂಡವು, ಈಗ 20 ಜನರ ಕಾಯಂ ಸದಸ್ಯತ್ವ ಹೊಂದಿದೆ. ಜತೆಗೆ ವಿವಿಧ ಕಾರ್ಯಕ್ರಮಗಳ ಸಂದರ್ಭದಲ್ಲಿ ಸ್ವಯಂ ಸೇವಕರಾಗಿ 200ಕ್ಕೂ ಹೆಚ್ಚು ಯುವಕರು ಭಾಗಿಯಾಗುತ್ತಾರೆ.

